# ಹಳೆಯ ಪಿಂಚಣಿ ಮರು ಜಾರಿ ಮಾಡಲು ಆಗ್ರಹ

## ಹರಪನಹಳ್ಳಿಯಲ್ಲಿ ಸರ್ಕಾರಿ ಎನ್‌ಪಿಎಸ್ ನೌಕರರಿಂದ ಪ್ರತಿಭಟನೆ



ಹರಪನಹಳ್ಳಿ, ಜ.17- ಕರ್ನಾಟಕ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘದ ರಾಜ್ಯ ಘಟಕ ಬೆಂಗಳೂರು ಅವರ ನಿರ್ದೇಶನದಂತೆ ಹೊಸ ಪಿಂಚಣಿ ರದ್ದುಪಡಿಸಿ, ಹಳೆಯ ಪಿಂಚಣಿ ಮರು ಜಾರಿಗೆ ತರಬೇಕೆಂದು ಸರ್ಕಾರದ ಮೇಲೆ ಒತ್ತಡ ತರಲು ತಾಲ್ಲೂಕು ಎನ್‌ಪಿಎಸ್ ನೌಕರರ ಸಂಘದಿಂದ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್ ಅವರಿಗೆ ಮನವಿ ಸಲ್ಲಿಸಲಾಯಿತು.

ಸುಮಾರು 35ಕ್ಕೂ ಹೆಚ್ಚು ಇಲಾಖೆಗಳ 200ಕ್ಕೂ ಹೆಚ್ಚು ನೌಕರರು ಸೇರಿ ಸಲ್ಲಿಸಿದ ಮನವಿಗೆ ಸ್ಪಂದಿಸಿದ ಶಾಸಕರು, ತಕ್ಷಣವೇ ವಿಜಯನಗರ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಇ.ಜಡ್.ಜಮೀರ್ ಅಹ್ಮದ್ ಅವರಿಗೆ ಫೋನ್ ಕರೆ ಮಾಡಿ, ನಮ್ಮ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ಸೇರಿಸಿದ 2006ರ ನಂತರದ ಸೇವೆಗೆ ಸೇರಿದ ಸರ್ಕಾರಿ ಅನುದಾನಿತ ಹಾಗೂ ನಿಗಮ, ಮಂಡಳಿ ನೌಕರರಿಗೆ ತಕ್ಷಣವೇ ಹಳೇಯ ಪಿಂಚಣಿ ವ್ಯವಸ್ಥೆಯನ್ನು ಜಾರಿಗೆ ಮಾಡಲು ಸಚಿವ ಸಂಪುಟದಲ್ಲಿ ನಿರ್ಧಾರ ತೆಗೆದುಕೊಳ್ಳಬೇಕೆಂದು ಮನವಿ ಮಾಡಿದರು.

ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವರು, ಆರನೇ ಗ್ಯಾರಂಟಿಯಾಗಿ ಹಳೆಯ ಪಿಂಚಣಿ ವ್ಯವಸ್ಥೆಯನ್ನು ಜಾರಿಗೆ ತರಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಇಡೀ ಸಭೆಗೆ ಭರವಸೆ ನೀಡಿದರು

ಈ ಸಂದರ್ಭದಲ್ಲಿ ಎನ್‌ಪಿಎಸ್ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಪಿ. ಅಂಜಿನಪ್ಪ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಸೊಪ್ಪಿನ ಹನುಮಂತಪ್ಪ ಮಾತನಾಡಿ, ಸಂಘದ ಒಂದೇ ಒಂದು ಬೇಡಿಕೆಯಾದ ಹಳೇಯ ಪಿಂಚಣಿಯನ್ನು ಜಾರಿಗೊಳಿಸಲು ಒತ್ತಾಯಿಸಿದರು.

ತಾಲ್ಲೂಕಿನ ಸಂಘಟನೆಯ ಬೆನ್ನೆಲುಬು ವಿಜಯನಗರ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಸಂಗಪ್ಪನವರ್, ರಾಜ್ಯ ಉಪಾಧ್ಯಕ್ಷರಾದ ಪದ್ಮಲತಾ, ನೌಕರರ ಸಂಘದ ಅಧ್ಯಕ್ಷ ಎಸ್.ರಾಮಪ್ಪ, ಶಿಕ್ಷಕರ ಸಂಘದ ಅಧ್ಯಕ್ಷ ಬಿ. ರಾಜಶೇಖರ್, ಕಾರ್ಯದರ್ಶಿ ನಟರಾಜ್ ಬಿ. ದೇವೇಂದ್ರಗೌಡ್ರು, ಮಂಜುನಾಥ್, ದಯಾನಂದ್, ರಮೇಶ್, ಪದ್ಮರಾಜ್ ಜೈನ್, ಷರೀಫ್ ಸಾಬ್, ಉಸ್ಮಾನ್, ಚಂದ್ರಮೌಳಿ, ಎ.ಎಂ.ಗುರುಪ್ರಸಾದ್, ನೌಕರರ ಸಂಘದ ಖಜಾಂಚಿ ಚಂದ್ರಪ್ಪ, ಅಶೋಕ್ ಬುಳ್ಳನಗೌಡ, ಮುಸ್ತಫಾ, ಆಲದಹಳ್ಳಿ ಮಂಜುನಾಥ್, ಬಂದಮ್ಮ, ಕೊಟ್ರಮ್ಮ, ಅರ್ಜುಮುನ್ನೀಸಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಮಲೇಬೆನ್ನೂರು ಸೌಂದರ್ಯ ಹೆಚ್ಚಿಸಲು ಎಲ್ಲರ ಸಹಕಾರ ಅಗತ್ಯ : ಶಾಸಕ ಹರೀಶ್




ಮಲೇಬೆನ್ನೂರು, ಜ.17- ಪಟ್ಟಣದ ಸೌಂದರ್ಯವನ್ನು ಹೆಚ್ಚಿಸುವ ಕೆಲಸ ಮಾಡಲು ಸಾರ್ವಜನಿಕರು ಮತ್ತು ವ್ಯಾಪಾರಸ್ಥರು ಸಹಕರಿಸಬೇಕೆಂದ ಶಾಸಕ ಬಿ.ಪಿ.ಹರೀಶ್ ಹೇಳಿದರು.

ಪಟ್ಟಣದ ನಂದಿಗುಡಿ ರಸ್ತೆಯ ಅಕ್ಕ-ಪಕ್ಕದಲ್ಲಿ ಸಿ.ಸಿ ಚರಂಡಿ ನಿರ್ಮಿಸಲು ತೆರವು ಮಾಡಿದ್ದ ಶೆಡ್‌ಗಳನ್ನು ಪುನಃ ಅಲ್ಲಿಯೇ ಇಡಲು ಅವಕಾಶ ಮಾಡಿಕೊಡುವಂತೆ ವ್ಯಾಪಾರಸ್ಥರು ಮನವಿ ಮಾಡಿದ ಹಿನ್ನೆಲೆಯಲ್ಲಿ ಶಾಸಕರು ಬುಧವಾರ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ, ನಂತರ ಪುರಸಭೆ ಕಚೇರಿಯಲ್ಲಿ ಅಧಿಕಾರಿಗಳು ಮತ್ತು ವ್ಯಾಪಾರಸ್ಥರೊಂದಿಗೆ ಸಭೆ ನಡೆಸಿ, ಮಾತನಾಡಿದರು.

ಪಟ್ಟಣದಲ್ಲಿ ಇನ್ನು ಮುಂದೆ ಏನೇ ಮಾಡಿದರೂ ಪ್ಲಾನ್ ಪ್ರಕಾರ ಮಾಡಬೇಕು. ಏಕೆಂದರೆ, ಪಟ್ಟಣ ಬೆಳೆಯುತ್ತಿರುವುದರಿಂದ ನಾವು ಮುಂದಿನ ವ್ಯವಸ್ಥೆಗೆ ಸಜ್ಜಾಗಬೇಕಿದೆ. ಹಾಗಾಗಿ ವ್ಯಾಪಾರಿಗಳು ಎಲ್ಲೆಂದರಲ್ಲಿ ಶೆಡ್‌ಗಳನ್ನು ಇಡಬೇಡಿ. ಪುರಸಭೆ ನಿಗದಿ ಮಾಡುವ ಸ್ಥಳದಲ್ಲಿ ವ್ಯಾಪಾರ ಮಾಡಿ ಎಂದು ಹರೀಶ್ ಸಲಹೆ ನೀಡಿದರು.


ಬೀದಿ ಬದಿ ವ್ಯಾಪಾರಿಗಳಿಗೆ ತೊಂದರೆ ಕೊಡುವ ಉದ್ದೇಶ ಯಾರಿಗೂ ಇಲ್ಲ. ಆದರೆ, ನಿಯಮಗಳನ್ನು ಯಾರೂ ಉಲ್ಲಂಘನೆ ಮಾಡಬಾರದೆಂದು ಹೇಳಿದ ಹರೀಶ್ ಅವರು, ನಂದಿಗುಡಿ ರಸ್ತೆ ಡಾಂಬರೀಕರಣ ಮತ್ತು ರಸ್ತೆಯ ಅಕ್ಕ-ಪಕ್ಕದಲ್ಲಿ ಚರಂಡಿವರೆಗೂ ಸಿಮೆಂಟ್ ಬ್ರಿಕ್ಸ್ ಹಾಕಿದ ನಂತರ 6x6 ಅಳತೆಯಲ್ಲಿ ಒಂದೇ ತರಹದಲ್ಲಿ ಶೆಡ್‌ಗಳನ್ನು ನಿರ್ಮಿಸಲು ಅವಕಾಶ ಮಾಡಿಕೊಡುತ್ತೇವೆಂದು ಹೇಳಿದರು. ಇದಕ್ಕೆ ವ್ಯಾಪಾರಸ್ಥರು ಸಮ್ಮತಿ ಸೂಚಿಸಿ, ಶಾಸಕ ಹರೀಶ್ ಅವರಿಗೆ ಕೃತಜ್ಞತೆ ಸಲ್ಲಿಸಿದರು.

### ಮಲೇಬೆನ್ನೂರಿನಿಂದ ಕೊಕ್ಕನೂರಿನವರೆಗೆ ಹದಗೆಟ್ಟ ರಸ್ತೆ ಅಭಿವೃದ್ಧಿಗೆ ಶೀಘ್ರ ಚಾಲನೆ

ಈ ವೇಳೆ ಹಾಜರಿದ್ದ ಲೋಕೋಪಯೋಗಿ ಇಲಾಖೆಯ ಎಇ ಬಿ.ಜಿ.ಶಿವರುದ್ರಪ್ಪ ಅವರು, 4 ಕೋಟಿ ರೂ. ವೆಚ್ಚದಲ್ಲಿ ಮಲೇಬೆನ್ನೂರಿನ ಎಸ್.ಹೆಚ್.ರಸ್ತೆಯಿಂದ ಕೊಕ್ಕನೂರಿನವರೆಗೆ ಹದಗೆಟ್ಟಿರುವ ರಸ್ತೆಯಲ್ಲಿ ಅಭಿವೃದ್ಧಿಗೆ ಶೀಘ್ರ ಚಾಲನೆ ನೀಡಲಾಗುವುದು ಎಂದರು.

ಪುರಸಭೆ ಸದಸ್ಯರಾದ ಬಿ.ಮಂಜುನಾಥ್, ಗೌಡ್ರ ಮಂಜುನಾಥ್, ಕೆ.ಪಿ.ಗಂಗಾಧರ್, ಭೋವಿಕುಮಾರ್, ಯೂಸೂಫ್, ಕಣ್ಣಾಳ್ ಪರಸಪ್ಪ, ಕಣ್ಣಾಳ್ ಹನುಮಂತಪ್ಪ, ಕೆ.ಎಸ್. ಬೀರಪ್ಪ, ಪಾಳೇಗಾರ್ ನಾಗರಾಜ್, ಭೋವಿ ಮಂಜಣ್ಣ, ಜಿಗಳಿ ಹನುಮಗೌಡ, ಗುತ್ತಿಗೆದಾರ ಬಿ.ಎಂ.ಜಗದೀಶ್ ಸ್ವಾಮಿ, ಪುರಸಭೆ ಇಂಜಿನಿಯರ್ ಮಂಜುನಾಥ್, ಕಂದಾಯಾಧಿಕಾರಿ ಪ್ರಭು ಮತ್ತಿತರರು ಈ ವೇಳೆ ಹಾಜರಿದ್ದರು.

# ಮೆಗಾ ಮಾರುಕಟ್ಟೆ; ಸರ್ಕಾರದ ಷರತ್ತುಗಳ ವಿರುದ್ಧ ವರ್ತಕರ ಪ್ರತಿಭಟನೆ



ರಾಣೇಬೆನ್ನೂರು

ರಾಣೇಬೆನ್ನೂರು, ಜ.17- ಹೂಲಿಹಳ್ಳಿ-ಕೂನಬೇವು ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ 22 ವರ್ಷಗಳ ಹಿಂದೆ ನಿರ್ಮಿಸಿದ ಎಪಿಎಂಸಿ ಉಪ ಮಾರುಕಟ್ಟೆ ಮೆಗಾ ಮಾರ್ಕೆಟ್ ನಲ್ಲಿ ವರ್ತಕರಿಗೆ ನಿವೇಶನಗಳನ್ನ ಹಂಚಲು ಹಾಕುವ ಸರ್ಕಾರದ ಷರತ್ತುಗಳನ್ನು ವಿರೋಧಿಸಿ, ಇಲ್ಲಿನ ವರ್ತಕರಿಂದು ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ನಿವೇಶನಗಳಲ್ಲಿ ಶೇ. 60 ಸ್ಥಳೀಯರಿಗೆ, ಶೇ. 40 ಹೊರಗಿನ ವರ್ತಕರಿಗೆ ಕೊಡುವ. ಬಿ ಬ್ಲಾಕ್ ನ ಎಲ್ಲ ನಿವೇಶನಗಳನ್ನು ಮೆಣಸಿನಕಾಯಿ ವರ್ತಕರಿಗೆ ಮೀಸಲಿರಿಸಿರುವ ಹಾಗೂ ನ್ಯಾಯಾಲಯದ ಆದೇಶದಂತೆ ಭೂ ಮಾಲೀಕರಿಗೆ ಹೆಚ್ಚುವರಿ ಪರಿಹಾರವನ್ನು ವರ್ತಕರು ಕೊಡಲು ಬದ್ದರಾಗಿರುವ ಪ್ರಮಾಣಪತ್ರ ಸಲ್ಲಿಸುವ ಷರತ್ತಿಗೆ ತೀವ್ರ ವಿರೋಧವನ್ನು ಮನವಿಯಲ್ಲಿ ತಿಳಿಸಲಾಗಿದೆ.

ಸರ್ಕಾರ ಬದಲಾದಂತೆ ಹೊಸ ಷರತ್ತುಗಳು ಸೇರಿಕೊಳ್ಳುತ್ತಿವೆ. ಅಧಿಕಾರಿ ಗಳು ಸರ್ಕಾರದ ಸುತ್ತೋಲೆಗಳ ಬಗ್ಗೆ ವರ್ತಕರೊಡನೆ ಚರ್ಚಿಸದೇ ನಿರ್ಣಯ ಮಾಡಿರುವುದನ್ನ ವಿರೋಧಿಸಲಾಯಿತು. ಎರಡು ದಶಕಗಳ ಹಾಗೂ ಇಂದಿನ ಜಮೀನು ದರಕ್ಕೂ ಬಹಳಷ್ಟು ಅಂತರವಿದ್ದು, ರೈತರ ಪರಿಹಾರದ ಹಣ ಸಂಪೂರ್ಣ ಸಂದಾಯ ಮಾಡಿ ನಿವೇಶನ ವಿತರಿಸುವಂತೆ ವರ್ತಕರು ಒತ್ತಾಯಿಸಿದರು.

ವರ್ತಕರ ಸಂಘದ ಅಧ್ಯಕ್ಷ ಗದಿಗೆಪ್ಪ ಹೊಟ್ಟಿಗೌಡ್ರ ಹಾಗೂ ಆಡಳಿತ ಮಂಡಳಿ ನಿರ್ದೇಶಕರು, ಮುಖಂಡರಾದ ಸದಾನಂದ ಉಪ್ಪಿನ, ಎಂ.ಎಸ್.ಅರಳಿ, ರಾಜು ಮೋಟಗಿ, ಸೋಮನಗೌಡ ಗೌಡ ಶಿವಣ್ಣನವರ, ವಿ.ಪಿ.ಲಿಂಗನಗೌಡ, ಉಮೇಶ ಹೊನ್ನಾಳಿ ಇನ್ನಿತರೆ ವರ್ತಕರಿದ್ದರು.

## ಇಂದು 'ಮಂದಿರವಲ್ಲೇ ಕಟ್ಟಿದೆವು!' ಕೃತಿ ಬಿಡುಗಡೆ

'ಮಂದಿರವಲ್ಲೇ ಕಟ್ಟಿದೆವು !' (ರಾಮ ಜನ್ಮ ಭೂಮಿಗಾಗಿ ನಡೆದ 496 ವರ್ಷಗಳ ಹೋರಾಟ ಪರಿಚಯಿಸುವ ಸಂಗ್ರಹ ಯೋಗ್ಯ ಕೃತಿ) ಯು ಸೋಮೇಶ್ವರ ಶಾಲೆ ಬಳಿಯ ನೇತ್ರಾವತಿ ಕನ್ವೆನ್ಷನ್ ಹಾಲ್‌ನಲ್ಲಿ ಇಂದು ಬೆಳಿಗ್ಗೆ 11 ಕ್ಕೆ ಬಿಡುಗಡೆಗೊಳ್ಳಲಿದೆ.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕ್ಷೇತ್ರೀಯ ಕಾರ್ಯವಾಹರಾದ ನಾ. ತಿಪ್ಪೇಸ್ವಾಮಿ ಕೃತಿ ಬಿಡುಗಡೆ ಮಾಡುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ವಹಿಸುವರು. ಮುಖ್ಯ ಅತಿಥಿಗಳಾಗಿ ಎನ್. ರಾಜಶೇಖರ್, ಕೆ.ಎಂ. ಸುರೇಶ್, ಜಯರುದ್ರೇಶ್, ರಮೇಶ್ ಕುಮಾರ್ ನಾಯಕ್ ಅವರುಗಳು ಆಗಮಿಸುವರು. ಸಮಾರಂಭದ ಆರಂಭದಲ್ಲಿ 'ಅನುಶ್ರೀ' ಬಳಗದ ಶ್ರೀಮತಿ ವೀಣಾ ಹೆಗಡೆ ತಂಡದಿಂದ ರಾಮನ ಹಾಡುಗಳ ಗಾಯನ ನಡೆಯುವುದು. ಸೋಮೇಶ್ವರ ಪ್ರತಿಷ್ಠಾನದ ಆಶ್ರಯದಲ್ಲಿ ಪುಸ್ತಕ ಬಿಡುಗಡೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

## ನಗರದಲ್ಲಿಂದು ಚಿಂತನೆ - ಸಂವಾದ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಇಂದು ಸಂಜೆ 6 ಕ್ಕೆ 'ಅಂಬಿಗರ ಚೌಡಯ್ಯನ ವಚನ ಗಳ ಮನನ ಮತ್ತು ಆಚರಣೆ' ವಿಷಯವಾಗಿ ಚಿಂತಕ ಶಿವನಕೆರೆ ಬಸವಲಿಂಗಪ್ಪ ಅವರಿಂದ ಚಿಂತನೆ ಮತ್ತು ಸಂವಾದ ಕಾರ್ಯಕ್ರಮ ನಡೆಯಲಿದೆ. ಪ್ರೊ. ಎಂ. ಬಸವರಾಜ್, ಎಸ್. ಗುರುಮೂರ್ತಿ, ಆರ್. ಆರ್. ಕುಸಗೂರು, ಮಲ್ಲಾಬಾದಿ ಬಸವರಾಜ್ ಭಾಗವಹಿಸಲಿದ್ದಾರೆ.

# ನಗರ - ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ




ದೇವರಾಜ ಅರಸು ಬಡಾವಣೆ ಎ, ಬಿ ಮತ್ತು ಸಿ ಬ್ಲಾಕ್, ಕರೂರು ಇಂಡಸ್ಟ್ರಿಯಲ್ ಏರಿಯಾ, ಡಿ.ಸಿ. ಕಛೇರಿ, ಜಿ.ಎಂ.ಐ.ಟಿ., ಶಂಕರ್ ವಿಹಾರ್ ಬಡಾವಣೆ, ಶಾಂತಿ ನಗರ, ರಶ್ಮಿ, ಹರಿಹರ ರಸ್ತೆ, ವಿಜಯನಗರ, ಅಶೋಕ ನಗರ, ಆರ್.ಟಿ.ಓ. ಕಛೇರಿ, ಎಸ್.ಪಿ. ಕಛೇರಿ, ರಿಂಗ್ ರಸ್ತೆ, ಶಿಬಾರ, ಎಸ್.ಎಂ.ಕೆ. ನಗರ ಹಾಗೂ ಚಿತ್ತಾನಹಳ್ಳಿ, ಕಕ್ಕರಗೊಳ್ಳ, ಆವರಗೊಳ್ಳ, ನೀಲಾನಹಳ್ಳಿ, ದೇವರಹಟ್ಟಿ, ದೊಡ್ಡಬಾತಿ, ಹಳೇಬಾತಿ, ನಾರಾಯಣ ಕ್ಯಾಂಪ್, ಯರಗುಂಟೆ, ಕೋಡಿಹಳ್ಳಿ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ಮಾಮಾಸ್ ಜಾಯಿಂಟ್ ರಸ್ತೆ, ಹೆಚ್.ಕೆ.ಆರ್. ಸರ್ಕಲ್, ಕೆ.ಇ.ಬಿ.ಕಾಲೋನಿ, ನಿಟುವಳ್ಳಿ, ನಿಟುವಳ್ಳಿ ಹೊಸ ಬಡಾವಣೆ, ಮೌನೇಶ್ವರ ಬಡಾವಣೆ, ಸೈಯದ್ ಪೀರ್ ಬಡಾವಣೆ, ಐ.ಟಿ.ಐ. ರಿಂಗ್ ರಸ್ತೆ, ಜಯನಗರ, ದುರ್ಗಾಂಬಿಕಾ ದೇವಸ್ಥಾನ, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಭಗೀರಥ ಸರ್ಕಲ್, ಕಾಳಿಕಾಂಬ ದೇವಸ್ಥಾನ, ಶಕ್ತಿ ನಗರ, ಇ.ಎಸ್.ಐ ಆಸ್ಪತ್ರೆ, ಶಕ್ತಿನಗರ, ಬನಶಂಕರಿ ದೇವಸ್ಥಾನ, ರಾಜೇಂದ್ರ ಬಡಾವಣೆ, ಪಿ.ಬಿ. ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶ.

ಶ್ರೀ ಮುರುಘರಾಜೇಂದ್ರ ಸ್ವಾಮಿಗಳ ಮಠ, ಜಾಧವ್ ಕ್ಲಿನಿಕ್ ಸುತ್ತಮುತ್ತ, ಶಿವಪ್ಪ ವೃತ್ತದಿಂದ ಜಯದೇವ ವೃತ್ತದವರೆಗೆ ಹಾಗೂ ಸುತ್ತಮುತ್ತಲ ಪ್ರದೇಶಗಳು.

ಪೊಲೀಸ್ ಕ್ವಾರ್ಟರ್ಸ್, ತುಂಗಾ, ಭದ್ರಾ, ಸರಸ್ವತಿ, ಕೃಷ್ಣ ಬ್ಲಾಕ್, ಅರುಣ ಸರ್ಕಲ್, ಎಂಸಿಸಿ 'ಎ'ಬ್ಲಾಕ್, ನ್ಯಾಯಾಧೀಶರ ವಸತಿ ಗೃಹಗಳು, ತೊಗಟವೀರ ಕಲ್ಯಾಣ ಮಂದಿರ, ವಿನೋಬನಗರ 1ನೇ ಮುಖ್ಯರಸ್ತೆ, ಎಸ್.ಎಸ್. ಬಡಾವಣೆ 'ಎ' ಬ್ಲಾಕ್, ಶಾಂತಿ ನಗರ, ಕುಂದುವಾಡ ರಸ್ತೆ, ಮಹಾನಗರ ಪಾಲಿಕೆ ಕುಡಿಯುವ ನೀರಿನ ಸ್ಥಾವರ, ಬಸವೇಶ್ವರ ಬಡಾವಣೆ, ಮಹಾಲಕ್ಷ್ಮಿ ಬಡಾವಣೆ, ಬಾಲಾಜಿ ನಗರ, ಕುಂದುವಾಡ ಕೆರೆ ಹಾಗೂ ಸುತ್ತಮುತ್ತಲ ಪ್ರದೇಶಗಳು.

ಎವಿಕೆ ಕಾಲೇಜು ರಸ್ತೆ, ರತ್ನಮ್ಮ ಮಹಿಳಾ ಹಾಸ್ಟೆಲ್, ಸೀತಮ್ಮ ಕಾಲೇಜು ಮತ್ತು ಬಡಾವಣೆ ಪೊಲೀಸ್ ಠಾಣೆ, ಹದಡಿ ರೋಡ್, ನಿಟುವಳ್ಳಿ, ನಿಟುವಳ್ಳಿ ಹೊಸ ಬಡಾವಣೆ, ದುರ್ಗಾಂಬಿಕಾ ದೇವಸ್ಥಾನ, 60 ಅಡಿ ರಸ್ತೆ, ಪಿ.ಬಿ. ರೋಡ್, ರಿಲಯನ್ಸ್ ಮಾರ್ಕೆಟ್, ಸುಲ್ತಾನ ಡೈಮಂಡ್ಸ್, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಡೆಂಟಲ್ ಕಾಲೇಜು ರಸ್ತೆ, ಮ್ಯಾಕ್ಸ್, ಕೆಎಸ್‌ಪಿ, ಕಡ್ಲಿ ಬಿಲ್ಡಿಂಗ್, ಬಿಎಸ್‌ಸಿ, ಎಆರ್‌ಜಿ ಕಾಲೇಜು ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ನಿಜಲಿಂಗಪ್ಪ ಬಡಾವಣೆ, ರಿಂಗ್ ರೋಡ್, ಕುಂದುವಾಡ ರಸ್ತೆ, ಯಲ್ಲಮ್ಮ ನಗರ, ವಿನೋಬನಗರ 4ನೇ ಮೇನ್, 3ನೇ ಮೇನ್, ಇಎಸ್‌ಐ ಆಸ್ಪತ್ರೆ, ಎಂ.ಬಿ. ಕೇರಿ, ಹೊಂಡದ ಸರ್ಕಲ್, ಕಾಯಿಪೇಟೆ, ಜಾಲಿ ನಗರ, ಟೀಚರ್ ಕಾಲೋನಿ, ಶಿವಾಜಿ ನಗರ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇಡಬ್ಲ್ಯೂಎಸ್ ಕಾಲೋನಿ, ಹಳೆಪೇಟೆ, ಬಾರ್‌ಲೈನ್ ರಸ್ತೆ, ಇಎಸ್‌ಐ ಆಸ್ಪತ್ರೆ ಹಾಗೂ ಸುತ್ತಮುತ್ತಲ ಪ್ರದೇಶಗಳು.

ರೆಹಮಾನ್ ರಸ್ತೆ, ಮಂಡಕ್ಕಿ ಭಟ್ಟಿ 1ನೇ ಕ್ರಾಸ್‌ನಿಂದ 10ನೇ ಕ್ರಾಸ್ ವರೆಗೆ, ರಿಂಗ್ ರಸ್ತೆ, ಸಿದ್ಧರಾಮೇಶ್ವರ ಬಡಾವಣೆ, ಕಾರ್ಲ್‌ಮಾರ್ಕ್ಸ್ ನಗರ, ದೇವರಾಜ್ ಕ್ವಾರ್ಟರ್ಸ್ (ಬೇತೂರು ರಸ್ತೆ) ಸುತ್ತಮುತ್ತಲ ಪ್ರದೇಶಗಳು.

ಮಂಡಿಪೇಟೆ, ಅಶೋಕ ಟಾಕೀಸ್, ಬಿನ್ನಿ ಕಂಪನಿ ರಸ್ತೆ, ಮಹಾವೀರ್, ಕೆ.ಆರ್. ರಸ್ತೆ, ಗಡಿಯಾರ ಕಂಬ, ಬಿ.ಟಿ. ಗಲ್ಲಿ, ಬೆಳ್ಳೂಡಿ ಗಲ್ಲಿ, ಇಸ್ಲಾಂ ಪೇಟೆ, ಹೆರಿಗೆ ಆಸ್ಪತ್ರೆ, ಪೋಸ್ಟ್ ಆಫೀಸ್, ರೈಲ್ವೇ ಸ್ಟೇಷನ್, ವಿಜಯಲಕ್ಷ್ಮಿ ರಸ್ತೆ ಸ್ವಲ್ಪ ಭಾಗ, ವಸಂತ ಟಾಕೀಸ್ ರಸ್ತೆ ಸ್ವಲ್ಪ ಭಾಗ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಹರಪನಹಳ್ಳಿ : ಆದರ್ಶ ವಿದ್ಯಾಲಯದ 6ನೇ ತರಗತಿ ದಾಖಲಾತಿಗಾಗಿ ಅರ್ಜಿ ಆಹ್ವಾನ

ಹರಪನಹಳ್ಳಿ, ಜ.17 - ತಾಲ್ಲೂಕಿನ ಅನಂತನಹಳ್ಳಿ ಸಮೀಪದ ಸರ್ಕಾರಿ ಆದರ್ಶ ವಿದ್ಯಾಲಯದ ಆರನೇ ತರಗತಿಯ ದಾಖಲಾತಿಗಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 6ನೇ ತರಗತಿ ವ್ಯಾಸಂಗ ಮಾಡುತ್ತಿರುವ ತಾಲ್ಲೂಕಿನ ನಿವಾಸಿಗಳು ಹಾಗೂ ಹರಪನಹಳ್ಳಿ ತಾಲ್ಲೂಕಿನ ನಿವಾಸಿಗಳ ಮಕ್ಕಳು ಬೇರೆ ತಾಲ್ಲೂಕು, ಜಿಲ್ಲೆಗಳಲ್ಲಿ ವ್ಯಾಸಂಗ ಮಾಡುವವರೂ ಸಹ ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಿದೆ. ಅರ್ಜಿ ಸಲ್ಲಿಸಲು ಕೊನೆ ದಿನಾಂಕ ಜ.17 ರಿಂದ ಪ್ರಾರಂಭವಾಗಿ ಬರುವ ಫೆ. 6 ರವರಿಗೆ ಕೊನೆಗೊಳ್ಳುತ್ತದೆ. ಅರ್ಜಿ ಸಲ್ಲಿಸುವ ಆನ್‌ಲೈನ್ ವಿಳಾಸ www.schooleducation.kar.nic.in, www.vidyavahini.karnataka.gov.in. ಮಾ. 3 ರಂದು ಪರೀಕ್ಷೆ ನಡೆಯುವ ದಿನಾಂಕವಾಗಿದೆ. ಹೆಚ್ಚಿನ ಮಾಹಿತಿಗೆ ಮುಖ್ಯೋಪಾಧ್ಯಾಯರು ಹೆಚ್.ಕೆ.ಚಂದ್ರಪ್ಪ (9880955078), ನೋಡಲ್ ಅಧಿಕಾರಿ ಗಳು ಮತ್ತು ಶಿಕ್ಷಣ ಸಂಯೋಜಕರಾದ ಗಿರಜ್ಜಿ ಮಂಜುನಾಥ (7975534725), ಪ್ರಥಮ ದರ್ಜೆ ಸಹಾಯಕ ದರ್ಶನ್ (96119 61461) ಇವರನ್ನು ಸಂಪರ್ಕಿಸಲು ಕೋರಿದೆ.


॥ ಶ್ರೀ ಕಲ್ಲೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**



ಜನನ : 30.11.1929 ಮರಣ : 03.01.2024

ದಾವಣಗೆರೆ ಜಿಲ್ಲೆ ಜಗಳೂರು ತಾ॥ ಹಾಲೇಕಲ್ಲು ಗ್ರಾಮದ ವಾಸಿ
ಶ್ರೀಮತಿ ನಾಗರತ್ನಮ್ಮ ಶ್ರೀ ಡಿ. ಬಸವನಗೌಡರು ಮತ್ತು ಸಹೋದರರು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 03.01.2024ನೇ ಬುಧವಾರ ಮುಂಜಾನೆ 03.45ಕ್ಕೆ
ನಮ್ಮ ಪೂಜ್ಯ ತಂದೆಯವರಾದ

**ಶ್ರೀ ದೊಡ್ಡಲಿಂಗಪ್ಪ ಕಲ್ಲಪ್ಪನವರು**

ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**"ಕೈಲಾಸ ಶಿವಗಣಾರಾಧನೆ"ಯನ್ನು**

ದಿನಾಂಕ : 18.01.2024ನೇ ಗುರುವಾರ ಬೆಳಿಗ್ಗೆ 10.30ಕ್ಕೆ ಹಾಲೇಕಲ್ಲು ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ನಾಗರತ್ನಮ್ಮ ಶ್ರೀ ಡಿ. ಬಸವನಗೌಡರು, ನಿವೃತ್ತ ಇಂಜಿನೀಯರ್
ಮತ್ತು ಸಹೋದರರು ಹಾಗೂ ಮಕ್ಕಳು, ಮೊಮ್ಮಕ್ಕಳು,
ಸೊಸೆಯಂದಿರು, ಅಳಿಯಂದಿರು, ಮರಿಮೊಮ್ಮಕ್ಕಳು,
ದೊಡ್ಡಲಿಂಗಪ್ಪ ವಂಶಸ್ಥರು, ಹಾಲೇಕಲ್ಲು ಗ್ರಾಮಸ್ಥರು
ಮತ್ತು ಬಂಧು-ಮಿತ್ರರು.
ಫೋ. : 94498 23965, 80739 95514, 97415 47779

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


## ವಾಯು ವಿಹಾರಿಗಳಿಂದ 21ರಂದು ಹರಿಹರಕ್ಕೆ ಕಾಲ್ನಡಿಗೆ

ದಾವಣಗೆರೆ, ಜ.17- ನಗರದ ಕುಂದವಾಡಕೆರೆ ವಾಯುವಿಹಾರ ಬಳಗದ ವತಿಯಿಂದ ಇದೇ ದಿನಾಂಕ 21ರ ಭಾನುವಾರ ಬೆಳಿಗ್ಗೆ 5-40ಕ್ಕೆ ಪಿ.ಬಿ. ರಸ್ತೆ, ಸಂಗೊಳ್ಳಿ ರಾಯಣ್ಣ ವೃತ್ತದ ಬಳಿ ಇರುವ ಬಿಎಸ್‌ಎನ್‌ಎಲ್ ಕಚೇರಿ ಬಳಿಯಿಂದ ಹರಿಹರದ ಶ್ರೀ ಹರಿಹರೇಶ್ವರ ದೇವಸ್ಥಾನದ ಆವರಣದವರೆಗೆ ಕಾಲ್ನಡಿಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಚಾಲಕರಲ್ಲೊಬ್ಬರಾದ ಈಶ್ವರ ಸಿಂಗ್ ಕವಿತಾಳ್ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ: 8971389102, 9844127137, 9448375866.




**ಭಾವಪೂರ್ಣ ಶ್ರದ್ಧಾಂಜಲಿ**

ದಿನಾಂಕ 17-01-2024 ರಂದು ನಿಧನರಾದ
**ಶ್ರೀ ಜಿ. ವೀರಭದ್ರಪ್ಪ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

**ಜಿ.ವಿ.ಪಾಟೀಲ್,**
ಕೆರೆಯಾಗಳಹಳ್ಳಿ ಗ್ರಾ.ಪಂ. ಮಾಜಿ ಸದಸ್ಯರು
ಹಾಗೂ ವರ್ತಕರು, ದಾವಣಗೆರೆ.


## ಜಿ. ವೀರಭದ್ರಪ್ಪ ನಿಧನ



ದಾವಣಗೆರೆ ಕುಂದುವಾಡ ಕೆರೆ ಹತ್ತಿರವಿರುವ ಬಾಲಾಜಿ ನಗರದ ವಾಸಿ

**ಜಿ. ವೀರಭದ್ರಪ್ಪ**

ಅವರು ದಿನಾಂಕ 17.1.2024ರ ಬುಧವಾರ ರಾತ್ರಿ 8.30ಕ್ಕೆ ನಿಧನರಾಗಿದ್ದಾರೆ. ಮೃತರಿಗೆ 80 ವರ್ಷ ವಯಸ್ಸಾಗಿತ್ತು. ಪತ್ನಿ ಜಿ.ವಿ. ಕೊಟ್ರಮ್ಮ ಹಾಗೂ ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಮತ್ತು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 18.01.2024ರ ಮಧ್ಯಾಹ್ನ 1 ಗಂಟೆಗೆ ಶಾಮನೂರಿನ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ : 9741676751, 9164616999**

# ಭಾನುವಳ್ಳಿ : 9ನೇ ದಿನಕ್ಕೆ ಕಾಲಿಟ್ಟ ಧರಣಿ

## ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ಬೆಂಬಲ



ಮಲೇಬೆನ್ನೂರು, ಜ.17 - ಭಾನುವಳ್ಳಿ ಗ್ರಾಮದ ಮದಕರಿ ನಾಯಕ ಮಹಾದ್ವಾರದ ಪಕ್ಕದಲ್ಲೇ ಅನಧಿಕೃತವಾಗಿ ರಾತ್ರೋರಾತ್ರಿ ಪ್ರತಿಷ್ಠಾಪಿಸಿರುವ ಸಂಗೊಳ್ಳಿ ರಾಯಣ್ಣನವರ ಪ್ರತಿಮೆಯನ್ನು ತೆರವುಗೊಳಿಸುವಂತೆ ಆಗ್ರಹಿಸಿ, ನಾಯಕ ಸಮಾಜದವರು ನಡೆಸುತ್ತಿರುವ ಅನಿರ್ದಿಷ್ಟಾವಧಿಯ ಧರಣಿ ಸತ್ಯಾಗ್ರಹವು ಬುಧವಾರ 9ನೇ ದಿನಕ್ಕೆ ಕಾಲಿಟ್ಟಿತು.

ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕ ಡಾ. ಎ.ಬಿ.ರಾಮಚಂದ್ರಪ್ಪ ಮತ್ತು ಬಂಧುತ್ವ ಫೌಂಡೇಷನ್ ಸಂಸ್ಥಾಪಕ ರಾಘು ದೊಡ್ಮನಿ ಈ ದಿನದ ಧರಣಿಯಲ್ಲಿ ಪಾಲ್ಗೊಂಡು ಬೆಂಬಲ ವ್ಯಕ್ತಪಡಿಸಿ, ಸಮಸ್ಯೆಯನ್ನು ಸಾಮರಸ್ಯದಿಂದ ಬಗೆಹರಿಸಿಕೊಳ್ಳೋಣ ಎಂದರು.

ಮಂಗಳವಾರ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಅವರು, ಧರಣಿಯಲ್ಲಿ ಭಾಗವಹಿಸಿ ಬೆಂಬಲ ವ್ಯಕ್ತಪಡಿಸಿ, ಜಿಲ್ಲಾಡಳಿತ ತತ್‌ಕ್ಷಣ ಸಮಸ್ಯೆಯನ್ನು ಇತ್ಯರ್ಥಗೊಳಿಸುವಂತೆ ಒತ್ತಾಯಿಸಿದರು.

ಹರಿಹರ ತಾಲ್ಲೂಕು ನಾಯಕ ಸಮಾಜದ ಅಧ್ಯಕ್ಷ ಜಿಗಳಿ ರಂಗಪ್ಪ, ಮಠದ ಧರ್ಮದರ್ಶಿ ಕೆ.ಬಿ. ಮಂಜುನಾಥ್, ಮಕರಿ ಪಾಲಾಕ್ಷಪ್ಪ, ಶ್ರೀಮತಿ ಪಾರ್ವತಿ ಬೋರಯ್ಯ, ಆಟೋ ರಾಜು, ಹಂಚಿನ ದೇವೇಂದ್ರಪ್ಪ, ಗ್ರಾಮದ ಟಿ.ಪುಟ್ಟಪ್ಪ, ಸಿದ್ದಪ್ಪ ದೊಡ್ಡಮನಿ, ಮಹಾಂತೇಶ್ ಕಮಲಾಪುರ, ಕರಿಬಸಪ್ಪ, ನಾಗರಾಜ್, ಶ್ರೀನಿವಾಸ್, ಲಕ್ಷ್ಮಪ್ಪ, ನಾರಾಯಣಪ್ಪ, ಮಂಜಪ್ಪ, ಶಿವು, ಧನ್ಯಕುಮಾರ್, ಜಯಪ್ಪ ಮತ್ತಿತರರು ಈ ವೇಳೆ ಹಾಜರಿದ್ದರು.

## ಬಿಐಇಟಿಯಲ್ಲಿ ಇಂದು ಕಾರ್ಯಾಗಾರ

ದಾವಣಗೆರೆ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ಮತ್ತು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಕೇಂದ್ರ, ಐ.ಐ.ಎಸ್.ಸಿ (ಬೆಂಗಳೂರು) ಇವರ ಸಂಯುಕ್ತಾಶ್ರಯದಲ್ಲಿ 'ಸಂಶೋಧನಾ ವಿಧಾನ ಮತ್ತು ಐಪಿಆರ್ ಕಾರ್ಯಾಗಾರವು ಇಂದು ಬೆಳಿಗ್ಗೆ 10 ಗಂಟೆಗೆ ಕಾಲೇಜು ಆವರಣದಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಭಾರತೀಯ ವಿಜ್ಞಾನ ಸಂಸ್ಥೆ, ಡಾ. ಟಿ.ವಿ. ಪ್ರಭಾಕರ, ಪ್ರೊ. ಎಚ್. ಎಸ್. ಜಮದಗ್ನಿ, ನಿರ್ದೇಶಕರಾದ ಡಾ. ಕಲ್ಲೈ ಸಾಕ್ರೆಟಿಸ್, ರಾಜೇಂದ್ರ ಕದಮ್, ಪ್ರೊ. ವೈ. ವೃಷಭೇಂದ್ರಪ್ಪ ಉಪಸ್ಥಿತರಿರುವರು. ಅಧ್ಯಕ್ಷತೆಯನ್ನು ಪ್ರಾಂಶುಪಾಲ ಡಾ. ಎಚ್. ಬಿ. ಅರವಿಂದ ವಹಿಸುವರು.

# ವಿಧಾನಸೌಧದ ಮೆಟ್ಟಿಲುಗಳ ಮೇಲೆ ಜನತಾದರ್ಶನ

(1ನೇ ಪುಟದಿಂದ) ಮೆಟ್ಟಿಲು ಗಳ ಮೇಲೆ ಜನತಾದರ್ಶನ ನಡೆಸುತ್ತಿದ್ದಾರೆ.

ಫೆಬ್ರವರಿ 8ರಂದು ಇಡೀ ದಿನ ಜನತಾದರ್ಶನ ನಡೆಯಲಿದ್ದು, ಅಂದು ಸರ್ಕಾರದ ಮುಖ್ಯ ಕಾಯದರ್ಶಿ ಸೇರಿದಂತೆ, ಇಲಾಖೆಯ ಮುಖ್ಯಸ್ಥರು ಹಾಗೂ ಹಿರಿಯ ಅಧಿಕಾರಿಗಳು ಸ್ಥಳದಲ್ಲಿ ಉಪಸ್ಥಿತರಿರಬೇಕು.

ಇದಕ್ಕೂ ಮುನ್ನ ಮುಖ್ಯಮಂತ್ರಿ ಅವರು, ಹಿಂದಿನ ಜನತಾದರ್ಶನ ಕಾರ್ಯಕ್ರಮಗಳಲ್ಲಿ ಆಗಿರುವ ಪ್ರಗತಿ ಸೇರಿದಂತೆ, ಉಳಿದ ವಿಚಾರಗಳ ಬಗ್ಗೆ ಮಾಹಿತಿ ಪಡೆಯಲು ಜನವರಿ 31ರಂದು ಜಿಲ್ಲಾ ಉಸ್ತುವಾರಿ ಹೊಣೆ ಹೊತ್ತ ಇಲಾಖಾ ಪ್ರಧಾನ ಕಾರ್ಯದರ್ಶಿಗಳ ಸಭೆ ಕರೆದಿದ್ದಾರೆ.

ಸಭೆಗೆ ಬರುವುದಕ್ಕೂ ಮುನ್ನ ತಮ್ಮ ಕಚೇರಿಯಿಂದ ಕಳುಹಿಸಿರುವ ಐದು ಪ್ರಶ್ನಾವಳಿಗಳಿಗೆ ಸಂಬಂಧಿಸಿದಂತೆ ಮಾಹಿತಿ ಮತ್ತು ಕಡತಗಳನ್ನು ಕಡ್ಡಾಯವಾಗಿ ತರುವಂತೆ ಮುಖ್ಯಮಂತ್ರಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ವಹಿಸಿಕೊಂಡ ನಂತರ ನೀವು ಎಷ್ಟು ಬಾರಿ ಆ ಜಿಲ್ಲೆಗೆ ತೆರಳಿದ್ದೀರಿ, ಜಿಲ್ಲೆಯಲ್ಲಿನ ಪ್ರಗತಿ ಪರಿಶೀಲನೆಗೆ ಎಷ್ಟು ಕಚೇರಿ ಮತ್ತು ಸಂಸ್ಥೆಗಳಿಗೆ ಭೇಟಿ ನೀಡಿದ್ದೀರಿ? ಜಿಲ್ಲೆಯಲ್ಲಿ ಯಾವ ಐದು ಇಲಾಖೆಗಳು ಉತ್ತಮವಾಗಿ ಕಾರ್ಯನಿರ್ವಹಿಸಿವೆ? ಯಾವ ಐದು ಇಲಾಖೆಗಳು ಕಳಪೆ ಕೆಲಸ ಮಾಡಿವೆ ಎಂಬ ಮಾಹಿತಿ ನೀಡಿ.

ಸರ್ಕಾರದ ಐದು ಪ್ರತಿಷ್ಠಿತ ಗ್ಯಾರಂಟಿ ಯೋಜನೆಗಳು ಯಾವ ಮಟ್ಟಕ್ಕೆ ಜನರನ್ನು ತಲುಪಿವೆ? ಇದರಿಂದ ಬಡವರಿಗೆ ಯಾವ ರೀತಿ ಸಹಕಾರಿಯಾಗಿದೆ? ಎಲ್ಲಿ ಇನ್ನೂ ಯೋಜನೆಗಳು ತಲುಪಿಲ್ಲ, ಏತಕ್ಕೆ? ಎಂಬ ಮಾಹಿತಿ ನೀಡುವಂತೆ ಉಸ್ತುವಾರಿ ಪ್ರಧಾನ ಕಾರ್ಯದರ್ಶಿಗಳಿಗೆ ಪಂಚ ಪ್ರಶ್ನೆಗಳನ್ನು ಇಟ್ಟಿದ್ದಾರೆ.

ಇದೆಲ್ಲದಕ್ಕೂ ಮಿಗಿಲಾಗಿ ಜನರ ಸಮಸ್ಯೆಯನ್ನು ಆಲಿಸಿ, ಅದಕ್ಕೆ ಪರಿಹಾರ ಕಂಡುಕೊಳ್ಳಲು ನಿಮ್ಮ ಬಳಿಗೆ ಬಂದ ಪತ್ರಗಳಿಗೆ ಯಾವ ರೀತಿ ಸ್ಪಂದನೆ ದೊರೆತಿದೆ ಎಂಬ ಮಾಹಿತಿ ಇಟ್ಟುಕೊಂಡು ಸಭೆಗೆ ಬರುವಂತೆ ಮುಖ್ಯಮಂತ್ರಿ ಅವರು ಆದೇಶಿಸಿದ್ದಾರೆ.

ಸಿದ್ದರಾಮಯ್ಯ ಅಧಿಕಾರ ವಹಿಸಿಕೊಂಡ ನಂತರ ಎರಡನೇ ಬಾರಿಗೆ ಬೃಹತ್ ಜನತಾದರ್ಶನ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಅಂದು ಸಾರ್ವಜನಿಕರು ನೀಡುವ ಅಹವಾಲುಗಳಿಗೆ ಸ್ಥಳದಲ್ಲಿಯೇ ಸ್ಪಂದಿಸಲು ಹತ್ತು ಹಲವು ಕಾರ್ಯಕ್ರಮಗಳನ್ನೂ ರೂಪಿಸಿದ್ದಾರೆ.

ವಿಧಾನಸೌಧದ ಮೆಟ್ಟಿಲುಗಳ ಮುಂಭಾಗದ ಇಡೀ ಆವರಣ ಸಾರ್ವಜನಿಕರ ಪ್ರವೇಶಕ್ಕೆ ಅಂದು ಮುಕ್ತವಾಗಿರಲಿದೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಅನುಸೂಚಿತ ಜಾತಿ, ಬುಡಕಟ್ಟು ಉಪಯೋಜನೆಯಡಿ ಜಿಲ್ಲೆಗೆ 402 ಕೋಟಿ ರೂ. ಗಳ ಕ್ರಿಯಾ ಯೋಜನೆ

## ಫೆಬ್ರವರಿ ಅಂತ್ಯಕ್ಕೆ ಶೇ. 90 ರಷ್ಟು ಪ್ರಗತಿ ಸಾಧಿಸಲು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಸೂಚನೆ



ದಾವಣಗೆರೆ, ಜ.17- ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟು ಉಪ ಯೋಜನೆಯಡಿ 2023-24 ನೇ ಸಾಲಿನಲ್ಲಿ ದಾವಣಗೆರೆ ಜಿಲ್ಲೆಗೆ 402 ಕೋಟಿ ರೂ. ಕ್ರಿಯಾ ಯೋಜನೆ ಅನುಮೋದಿತವಾಗಿದ್ದು ಬರುವ ಫೆಬ್ರವರಿ ಅಂತ್ಯಕ್ಕೆ ಶೇ. 90 ರಷ್ಟು ಪ್ರಗತಿ ಸಾಧಿಸಬೇಕೆಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ಸೂಚನೆ ನೀಡಿದರು.

ಅವರು ಬುಧವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಎಸ್‌ಸಿಪಿ, ಟಿಎಸ್‌ಪಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ಸಾಲಿನಲ್ಲಿ ಎಸ್‌ಸಿಪಿಯಡಿ ಕೇಂದ್ರ ವಲಯದಡಿ 82.29 ಕೋಟಿ, ರಾಜ್ಯ 136.6 ಕೋಟಿ ಹಾಗೂ 30.30 ಕೋಟಿ ಜಿಲ್ಲಾ ವಲಯ ಸೇರಿ 249.20 ಕೋಟಿಗೆ ಕ್ರಿಯಾ ಯೋಜನೆ ಅನುಮೋದಿಸಲಾಗಿದೆ. ಇದರಲ್ಲಿ ಇಲ್ಲಿಯವರೆಗೆ 134.28 ಕೋಟಿ ಬಿಡುಗಡೆಯಾಗಿ 99.17 ಕೋಟಿ ವೆಚ್ಚವಾಗಿದ್ದು ಶೇ. 73.86 ರಷ್ಟು ಪ್ರಗತಿಯಾಗಿದೆ. ವೈಯಕ್ತಿಕ ಸೌಲಭ್ಯ, ಮೂಲಭೂತ ಸೌಕರ್ಯ ಸೇರಿದಂತೆ 191136 ಗುರಿಯಲ್ಲಿ 149635 ಸಾಧನೆ ಮಾಡಲಾಗಿದೆ.

ಟಿಎಸ್‌ಪಿಯಡಿ ಕೇಂದ್ರ ವಲಯ ರೂ.62.46 ಕೋಟಿ, ರಾಜ್ಯ 70.49 ಕೋಟಿ ಹಾಗೂ ಜಿಲ್ಲಾ 19.96 ಕೋಟಿ ಸೇರಿ 152.93 ಕೋಟಿ ಮೊತ್ತದ ಕ್ರಿಯಾ ಯೋಜನೆಗೆ ಅನುಮೋದಿಸಲಾಗಿದೆ. ಇದರಲ್ಲಿ 83.46 ಕೋಟಿ ಬಿಡುಗಡೆಯಾಗಿದ್ದು 66.09 ಕೋಟಿ ವೆಚ್ಚ ಮಾಡಲಾಗಿ ಶೇ 79.18 ರಷ್ಟು ಪ್ರಗತಿ ಸಾಧಿಸಲಾಗಿದೆ. ಈ ಯೋಜನೆಯಡಿ ವೈಯಕ್ತಿಕ ಸೌಲಭ್ಯ ಹಾಗೂ ಮೂಲಭೂತ ಸೌಕರ್ಯದಡಿ 107810 ಗುರಿಯಲ್ಲಿ 74058 ಸಾಧನೆ ಮಾಡಲಾಗಿದೆ.

ಯಾವ ಇಲಾಖೆಗಳು ಶೇ. 75 ಕ್ಕಿಂತ ಕಡಿಮೆ ಪ್ರಗತಿ ಸಾಧಿಸಲಾಗಿದೆ, ಅವರು ಮಾರ್ಚ್ ಅಂತ್ಯದವರೆಗೆ ಕಾಯದೇ ಫೆಬ್ರವರಿಯಲ್ಲಿ ಪ್ರಗತಿ ಸಾಧಿಸಬೇಕು. ಕಾಮಗಾರಿಗಳನ್ನು ಕೈಗೊಳ್ಳುವಾಗ ಜನರಿಗೆ ಅನುಕೂಲವಾಗುವ ಜೊತೆಗೆ ಬಹಳ ದಿನಗಳವರೆಗೆ ಬಾಳಿಕೆ ಬರಬೇಕು. ಈ ನಿಟ್ಟಿನಲ್ಲಿ ಯೋಜನೆಗಳನ್ನು ಅನುಷ್ಠಾನ ಮಾಡಬೇಕೆಂದರು.

ಜಲಸಂಪನ್ಮೂಲ ಇಲಾಖೆಯಿಂದ ಎಸ್‌ಸಿಪಿ ಯಡಿ ರೂ.34 ಕೋಟಿ ಮತ್ತು ಟಿಎಸ್‌ಪಿಯಡಿ 17 ಕೋಟಿ ಇದ್ದು ಶೂನ್ಯ ಸಾಧನೆ ಮಾಡಲಾಗಿದೆ. ಸಿಸಿ ರಸ್ತೆ, ಸಮುದಾಯ ಭವನ, ಚೆಕ್ ಡ್ಯಾಂ ಕಾಮಗಾರಿ ತೆಗೆದುಕೊಳ್ಳಲಾಗಿದೆ ಎಂದು ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು. ಈ ವೇಳೆ ಜಿಲ್ಲಾಧಿಕಾರಿಯವರು ಜಲಸಂಪನ್ಮೂಲ ಇಲಾಖೆಯಿಂದ ನೀರಾವರಿ ಅಚ್ಚುಕಟ್ಟು ಪ್ರದೇಶದ ಕೊನೆ ಭಾಗದ ರೈತರಿಗೆ ಅನುಕೂಲವಾಗುವಂತೆ ಯೋಜನೆ ರೂಪಿಸಲು ತಿಳಿಸಿದರು.

**ರೇಷ್ಮೆ ಬೆಳೆಗೆ ಆದ್ಯತೆ ನೀಡಿ;** ಜಿಲ್ಲೆಯಲ್ಲಿ 610 ರೇಷ್ಮೆ ಬೆಳೆಯುವ ರೈತರಿದ್ದು, ಇಲಾಖೆಯಿಂದ ಇನ್ನೂ ಹೆಚ್ಚಿನ ರೈತರು ರೇಷ್ಮೆ ಬೆಳೆಯುವಂತೆ ಕ್ಷೇತ್ರ ಭೇಟಿಯ ಮೂಲಕ ಪ್ರೋತ್ಸಾಹಿಸುವ ಕೆಲಸ ಮಾಡಬೇಕು. ರೇಷ್ಮೆ ರೀಲಿಂಗ್ ಮಷಿನ್ ತರಿಸುವ ಮೂಲಕ ಮಾರುಕಟ್ಟೆ ಒದಗಿಸುವ ಜೊತೆಗೆ ರೇಷ್ಮೆ ಬೆಳೆ ಬೆಳೆಯಲು ಖಾತರಿಯಡಿ ಅವರಿಗೆ ಬೇಕಾದ ಸೌಕರ್ಯ ಕಲ್ಪಿಸಲು ಮುಂದಾಗಬೇಕು. ಕೋಲಾರ ಮತ್ತು ರಾಮನಗರದಲ್ಲಿ ರೇಷ್ಮೆ ಬೆಳೆದವರು ಕೋಟ್ಯಾಧಿಪತಿಗಳಾಗಿದ್ದಾರೆ. ಇಲ್ಲಿನ ರೈತರು ಇತರೆ ಕೃಷಿಯೊಂದಿಗೆ ರೇಷ್ಮೆ ಕೃಷಿಗೆ ಮುಂದಾದಲ್ಲಿ ಅವರ ಆರ್ಥಿಕ ಮಟ್ಟ ಇನ್ನೂ ಸುಧಾರಿಸಲಿದೆ ಎಂದರು.

**ಎಸ್.ಸಿ.ಪಿ., ಟಿಎಸ್‌ಪಿಯಡಿ ಟಿ.ಸಿ;** ಬೆಸ್ಕಾಂ ನಿಂದ ಎಸ್‌ಸಿಪಿ ಮತ್ತು ಟಿಎಸ್‌ಪಿ ಯಡಿ ರೈತರು ಸ್ವಂತವಾಗಿ ಕೊಳವೆಬಾವಿ ಕೊರೆಯಿಸಿದಾಗ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದವರಿಗೆ ಟಿಸಿಯನ್ನು ಅಳವಡಿಸಿ ಕೊಡಲಾಗುತ್ತದೆ. ಪ್ರತಿ ಘಟಕಕ್ಕೆ ರೂ.1.5 ಲಕ್ಷ ಪ್ರತಿ ರೈತರಿಗೆ ವೆಚ್ಚ ಮಾಡಲಾಗುತ್ತದೆ. ಈ ವರ್ಷ ಜಿಲ್ಲೆಯಲ್ಲಿ 15 ಎಸ್‌ಸಿಪಿ, 6 ಟಿಎಸ್‌ಪಿ ಗುರಿ ನೀಡಲಾಗಿರುತ್ತದೆ ಎಂದು ಬೆಸ್ಕಾಂ ಇಂಜಿನಿಯರ್ ಸಭೆಗೆ ಮಾಹಿತಿ ನೀಡಿದರು. ಈ ವೇಳೆ ಜಿಲ್ಲಾಧಿಕಾರಿಯವರು ಮಾತನಾಡಿ ಯೋಜನೆ ಬಗ್ಗೆ ರೈತರಿಗೆ ಮನವರಿಕೆ ಮಾಡಿಕೊಡಬೇಕೆಂದರು.

ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಕೃಷ್ಣನಾಯ್ಕ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ನಾಗರಾಜ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಹರಿಹರ ತಾಲ್ಲೂಕು ಬಗರ್ ಹುಕ್ಕುಂ ಸಾಗುವಳಿ ಸಮಿತಿಗೆ ನೇಮಕ





ಮಲೇಬೆನ್ನೂರು, ಜ. 17 - ಹರಿಹರ ತಾಲ್ಲೂಕು ಬಗರ್ ಹುಕ್ಕುಂ ಸಾಗುವಳಿ ಸಕ್ರಮೀಕರಣ ಸಮಿತಿಯನ್ನು ಸರ್ಕಾರ ರಚಿಸಿ, ನೂತನ ಸದಸ್ಯರನ್ನು ನೇಮಕ ಮಾಡಿದೆ. ಅಧ್ಯಕ್ಷರಾಗಿ ಶಾಸಕ ಬಿ.ಪಿ. ಹರೀಶ್, ಸದಸ್ಯರಾದ ಎಳೆಹೊಳೆ ಗ್ರಾಮದ ಹೆಚ್.ಬಿ. ಚಂದ್ರಶೇಖರ್, ವಾಸನದ ಶ್ರೀಮತಿ ಸವಿತಾ ಮಾಂತೇಶ್ ಮತ್ತು ಸದಸ್ಯ ಕಾರ್ಯದರ್ಶಿಯನ್ನಾಗಿ ತಹಶೀಲ್ದಾರ್ ಅವರನ್ನು ನೇಮಕ ಮಾಡಿ ಕಂದಾಯ ಇಲಾಖೆಯ ಅಧೀನ ಕಾರ್ಯದರ್ಶಿ ಕೆ.ಜಗದೀಶ್ ಆದೇಶ ಹೊರಡಿಸಿದ್ದಾರೆ.

ನೂತನ ಸದಸ್ಯರನ್ನು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಅವರ ಶಿಫಾರಸ್ಸಿನ ಮೇರೆಗೆ ನೇಮಕ ಮಾಡಲಾಗಿದೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ ತಿಳಿಸಿದ್ದಾರೆ.

## ಬೆಸ್ತರಿಗೆ ಆಧುನಿಕ ಸಂಪರ್ಕ ಸಾಧನ ವ್ಯವಸ್ಥೆ: ಇಸ್ರೋ

ಬೆಂಗಳೂರು, ಜ. 17 – ಭಾರತೀಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋ, ಸಮುದ್ರದಲ್ಲಿ ಬೆಸ್ತರಿಗೆ ಆಧುನಿಕ ಸಂಪರ್ಕ ಸಾಧನ ಒದಗಿಸುವ ಎರಡನೇ ಪೀಳಿಗೆಯ ವ್ಯವಸ್ಥೆ ಸಿದ್ಧಪಡಿಸಿದೆ.

ಎರಡನೇ ಪೀಳಿಗೆಯ ಸಂಕಷ್ಟ ಮುನ್ನೆಚ್ಚರಿಕೆ ಸಾಧನವು ಆಧುನಿಕ ಉಪಗ್ರಹ ಸಂಪರ್ಕ ಹಾಗೂ ದಿಕ್ಸೂಚಿ ವ್ಯವಸ್ಥೆಯನ್ನು ಹೊಂದಿದೆ. 2010ರಿಂದಲೂ ಈ ರೀತಿಯ ಉಪ ಕರಣಗಳನ್ನು ಬಳಸಲಾಗುತ್ತಿದೆ. ಪ್ರಸಕ್ತ 20 ಸಾವಿರಕ್ಕೂ ಹೆಚ್ಚು ಉಪ ಕರಣಗಳು ಬಳಕೆಯಲ್ಲಿವೆ ಎಂದು ಇಸ್ರೋ ತಿಳಿಸಿದೆ.

## ಕರಾಟೆ ಸ್ಪರ್ಧೆಗೆ ಶ್ರೀನಿವಾಸ್ ಆಯ್ಕೆ



ದಾವಣಗೆರೆ, ಜ.17- ಭೂಪಾಲ್‌ನಲ್ಲಿ ಜರುಗಲಿರುವ ಸೌತ್ ವೆಸ್ಟ್ ಜೋನ್‌ನ ಇಂಟರ್ ಯುನಿವರ್ಸಿಟಿ ಕರಾಟೆ ಸ್ಪರ್ಧೆಯಲ್ಲಿ ನಗರದ ಎ.ಜಿ.ಬಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿ ಪಿ. ಶ್ರೀನಿವಾಸ್, 90 ಕೆ.ಜಿ ವಿಭಾಗದಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿದ್ದಾರೆ.



## ಅಹಿಂದ ಪ್ರಧಾನ ಕಾರ್ಯದರ್ಶಿಯಾಗಿ ಗುಬ್ಬಿ

ದಾವಣಗೆರೆ, ಜ.17- ಅಹಿಂದ ಕರ್ನಾಟಕ ಅಲ್ಪಸಂಖ್ಯಾತರ ಹಿಂದುಳಿದ ವರ್ಗದ ದಲಿತ ಒಕ್ಕೂಟದ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಡಿ. ಬಸವರಾಜಪ್ಪ ಗುಬ್ಬಿ ನೇಮಕಗೊಂಡಿದ್ದಾರೆ.

## ಆದಾಯ ತೆರಿಗೆ ವಿಧಿಸಲು ಸಲಹೆ

**(1ನೇ ಪುಟದಿಂದ)** ನೀತಿ ಸಮಿತಿ ಸದಸ್ಯೆ ಅಶಿಮಾ ಗೋಯಲ್ ತಿಳಿಸಿದ್ದಾರೆ. ಸರ್ಕಾರ ಈಗ ಬಡ ರೈತರ ಖಾತೆಗಳಿಗೆ ಹಣ ಜಮಾ ಮಾಡುತ್ತಿದೆ. ಇದೊಂದು ರೀತಿ ಋಣಾತ್ಮಕ ಆದಾಯ ತೆರಿಗೆ ಇದ್ದಂತೆ. ಇದೇ ರೀತಿ ಶ್ರೀಮಂತರ ರೈತರಿಂದ ಧನಾತ್ಮಕ ಆದಾಯ ತೆರಿಗೆ ಪಡೆಯಬೇಕಿದೆ ಎಂದು ಗೋಯಲ್ ಹೇಳಿದ್ದಾರೆ.

# ರಾಜ್ಯ ಮಟ್ಟದ ಮಳೆಯಾಶ್ರಿತ ಶೇಂಗಾ ಬೆಳೆ ಸ್ಪರ್ಧೆ: ಜಿಲ್ಲೆಗೆ ಪ್ರಥಮ, ದ್ವಿತೀಯ ಸ್ಥಾನ



ನ್ಯಾಮತಿ, ಜ.17- ಕೃಷಿ ಇಲಾಖೆಯಿಂದ 2022-23ನೇ ಸಾಲಿನ ರಾಜ್ಯ ಮಟ್ಟದ ಕೃಷಿ ಪ್ರಶಸ್ತಿ ಬೆಳೆ ಸ್ಪರ್ಧೆ ಯೋಜನೆಯಡಿ ಮಳೆಯಾಶ್ರಿತ ಶೇಂಗಾ ಬೆಳೆ ಸ್ಪರ್ಧೆಯಲ್ಲಿ ರಾಜ್ಯ ಮಟ್ಟದ ಮೊದಲ ಎರಡೂ ಸ್ಥಾನಗಳನ್ನು ಜಿಲ್ಲೆಯ ರೈತರು ತಮ್ಮದಾಗಿಸಿಕೊಂಡಿದ್ದಾರೆ.

ಜಿಲ್ಲೆಯ ನ್ಯಾಮತಿ ತಾಲ್ಲೂಕಿನ ಬೆಳಗುತ್ತಿ ಗ್ರಾಮದ ಲಕ್ಷ್ಮಮ್ಮ ಪ್ರತಿ ಹೆಕ್ಟೇರಿಗೆ 34.65 ಕ್ವಿಂಟಾಲ್ ಇಳುವರಿ ಪಡೆದು ಪ್ರಥಮ ಸ್ಥಾನ ಪಡೆದರೆ, ಅದೇ ತಾಲ್ಲೂಕಿನ ಬೀಜೋಗಟ್ಟಿ ಗ್ರಾಮದ ಪ್ರಭಾಕರ ರೆಡ್ಡಿ ಪ್ರತಿ ಹೆಕ್ಟೇರಿಗೆ 34.50 ಕ್ವಿಂಟಾಲ್ ಇಳುವರಿ ಪಡೆದು ದ್ವಿತೀಯ ಸ್ಥಾನ ಪಡೆದಿದ್ದಾರೆ.

## ಜನರು ಶಿಕ್ಷಣದಲ್ಲಿ ಮುಂದುವರಿಕೆ

**(1ನೇ ಪುಟದಿಂದ)** ಯುವಕ – ಯುವತಿಯರು ಶಿಕ್ಷಣ ಸಂಸ್ಥೆಗಳಿಗೆ ಸೇರ್ಪಡೆಯಾಗಿಲ್ಲ. 11 ಹಾಗೂ 12ನೇ ತರಗತಿಯ ಅರ್ಧದಷ್ಟು ಜನರು ಮಾನವೀಯ ಅಧ್ಯಯನ ವಿಭಾಗದಲ್ಲಿದ್ದಾರೆ ಎಂದೂ ವರದಿ ತಿಳಿಸಿದೆ. ದೇಶದ 26 ರಾಜ್ಯಗಳ 28 ಜಿಲ್ಲೆಗಳಲ್ಲಿ 34,745 ಹದಿಹರೆಯದವರ ಅಧ್ಯಯನ ನಡೆಸಿದ ಈ ವರದಿ ರೂಪಿಸಲಾಗಿದೆ.

# ಸತತ ಎರಡನೇ ವರ್ಷ ಚೀನಾ ದೇಶದ ಜನಸಂಖ್ಯೆ ಇಳಿಕೆ

ಬೀಜಿಂಗ್, ಜ. 17 – ಸತತ ಎರಡನೇ ವರ್ಷ ಚೀನಾದ ಜನಸಂಖ್ಯೆ ಇಳಿಮುಖವಾಗಿದೆ. 20.8 ಲಕ್ಷ ಜನಸಂಖ್ಯೆ ಇಳಿಕೆಯಾಗಿದ್ದು, 140.97 ಕೋಟಿಗೆ ತಲುಪಿದೆ.

ಚೀನಾದ ವಾರ್ಷಿಕ ಜನಸಂಖ್ಯಾ ಮಾಹಿತಿಯನ್ನು ಪ್ರಕಟಿಸಲಾಗಿದೆ. ಆರು ದಶಕಗಳ ನಂತರ 2022ರಲ್ಲಿ ಮೊದಲ ಬಾರಿಗೆ ಚೀನಾದ ಜನಸಂಖ್ಯೆ ಇಳಿಕೆಯಾಗಿತ್ತು. 2023ರಲ್ಲೂ ಇದೇ ಪ್ರವೃತ್ತಿ ಮುಂದುವರೆದಿದೆ. ಒಂದು ಮಗು ನೀತಿಯು ಚೀನಾದ ಜನಸಂಖ್ಯೆ ಇಳಿಕೆಗೆ ಪ್ರಮುಖ ಕಾರಣವಾಗಿದೆ. ಚೀನಾ ಸರ್ಕಾರ ಒಂದು ಮಗು ನೀತಿ ಸಡಿಲಿಸಿದರೂ, ಜನಸಂಖ್ಯೆ ಕುಸಿತದ ಪರಿಸ್ಥಿತಿ ಬದಲಾಗಿಲ್ಲ.

ಕಳೆದ ವರ್ಷ ಚೀನಾದಲ್ಲಿ 90.2 ಲಕ್ಷ ಮಕ್ಕಳು ಜನಿಸಿವೆ. 2022ರಲ್ಲಿ 95.60 ಲಕ್ಷ ಮಕ್ಕಳು ಜನಿಸಿದ್ದವು. ಚೀನಾದಲ್ಲಿ ಪ್ರತಿ ಸಾವಿರ ಜನಸಂಖ್ಯೆಗೆ 6.39 ಮಕ್ಕಳ ಜನನವಾಗುತ್ತಿದೆ. ಇದು 1949ರ ನಂತರ ಅತಿ ಕಡಿಮೆಯಾಗಿದೆ. 2021ರಲ್ಲಿ ಚೀನಾ ಮೂರು ಮಕ್ಕಳ ನೀತಿ ಜಾರಿಗೆ ತಂದಿತ್ತು. ಹೆಚ್ಚು ಮಕ್ಕಳನ್ನು ಹೊಂದಲು ಹಲವಾರು ಉತ್ತೇಜನಗಳನ್ನು ಪ್ರಕಟಿಸಿತ್ತು. ಆದರೆ, ಮಕ್ಕಳನ್ನು ಬೆಳೆಸುವ ವೆಚ್ಚ ಹೆಚ್ಚಾಗುತ್ತಿರುವುದು, ವ್ಯಕ್ತಿವಾದದ ಕಡೆ ಹೆಚ್ಚುತ್ತಿರುವ ಆಕರ್ಷಣೆ ಹಾಗೂ ಜೀವನ ಶೈಲಿಯಲ್ಲಿನ ಬದಲಾವಣೆಯಿಂದಾಗಿ ಜನ ಹೆಚ್ಚು ಮಕ್ಕಳನ್ನು ಬಯಸುತ್ತಿಲ್ಲ.



ಕಳೆದ ವರ್ಷ 1.11 ಕೋಟಿ ಜನರು ಸಾವನ್ನಪ್ಪಿದ್ದಾರೆ. ಪ್ರತಿ ಸಾವಿರ ಜನಸಂಖ್ಯೆಗೆ ಸಾವನ್ನಪ್ಪುವವರ ಪ್ರಮಾಣ ಶೇ.7.87ರಷ್ಟಿದೆ.

ಚೀನಾದಲ್ಲಿ ಈಗ ವೃದ್ಧರ ಸಂಖ್ಯೆ ಹೆಚ್ಚಾಗುತ್ತಿದೆ. ದುಡಿಯುವ ವರ್ಗದಲ್ಲಿರುವ ಜನಸಂಖ್ಯೆ ಪ್ರಮಾಣ ಕಡಿಮೆಯಾಗುತ್ತಿದೆ. ವೆಚ್ಚ ಮಾಡುವ ಶಕ್ತಿ ಕಡಿಮೆಯಾಗುತ್ತಿದ್ದರೆ, ಸಾಮಾಜಿಕ ಭದ್ರತಾ ಹೊರೆ ಹೆಚ್ಚಾಗುತ್ತಿದೆ. ಇದು ಚೀನಾದ ಆರ್ಥಿಕತೆಯ ಮೇಲೆ ಪರಿಣಾಮ ಬೀರಬಹುದು ಎಂದೂ ಹೇಳಲಾಗುತ್ತಿದೆ. ಮುಂಬರುವ ವರ್ಷಗಳಲ್ಲಿ ಚೀನಾದ ಜನಸಂಖ್ಯೆ ಇನ್ನಷ್ಟು ತೀವ್ರವಾಗಿ ಇಳಿಯಲಿದೆ. ಕೊರೊನಾದ ಕರಿಛಾಯೆಯಿಂದ ಹೊರ ಬಂದ ನಂತರ ಮಕ್ಕಳ ಜನನ ಪ್ರಮಾಣ ಹೆಚ್ಚಾಗಬಹುದು. ಆದರೂ, ವರ್ಷಕ್ಕೆ 1 ಕೋಟಿ ದಾಟದು ಎಂದು ಫುಡಾನ್ ವಿಶ್ವವಿದ್ಯಾಲಯದ ಜನಸಂಖ್ಯಾ ನೀತಿ ಪರಿಣಿತ ಪ್ರೊ. ಪೆಂಗ್ ಶಿಝು ಹೇಳಿದ್ದಾರೆ.


ದಾವಣಗೆರೆಯ ಹೆಸರಾಂತ ಅಂಬರ್‌ಕರ್ ಪಂಪಂಣ ಬಟ್ಟೆ ಅಂಗಡಿಯ ಮಾಲೀಕರಾದ

# ವಿರೂಪಣ್ಣ ಪಂಪಂಣ ಅಂಬರ್‌ಕರ್ ನಿಧನ



ದಾವಣಗೆರೆ ಸಿಟಿ ವಾಸಿ

ದಿ|| ಅಂಬರ್‌ಕರ್ ಪಂಪಂಣ ಅವರ ಜೇಷ್ಠ ಪುತ್ರ

ದಾವಣಗೆರೆ ಚೌಕಿಪೇಟೆ - ಕಾಳಿಕಾದೇವಿ ರಸ್ತೆಯ ಹೆಸರಾಂತ ಜವಳಿ ವ್ಯಾಪಾರಿಗಳಾದ

ಅಂಬರ್‌ಕರ್ ಪಂಪಂಣ ಬಟ್ಟೆ ಅಂಗಡಿಯ ಮಾಲೀಕರಾದ

## ಹ.ಭ.ಪಾ. ವಿರೂಪಣ್ಣ ಪಂಪಂಣ ಅಂಬರ್‌ಕರ್

ಅವರು ದಿನಾಂಕ 17-01-2024ನೇ ಬುಧವಾರ ಮಧ್ಯಾಹ್ನ 2.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 92 ವರ್ಷ ವಯಸ್ಸಾಗಿತ್ತು.

ಮೃತರು ಓರ್ವ ಅಳಿಯ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಶ್ರೀ ವಿರೂಪಣ್ಣ ಪಂಪಂಣ ಅಂಬರ್‌ಕರ್ ಅವರ ಪಾರ್ಥಿವ ಶರೀರವನ್ನು ದಾವಣಗೆರೆಯ ಎಂ.ಸಿ.ಸಿ. 'ಬಿ' ಬ್ಲಾಕ್, ಕುವೆಂಪು ನಗರ, 21ನೇ ಮುಖ್ಯರಸ್ತೆ, 5ನೇ ತಿರುವಿನಲ್ಲಿರುವ ಮಾವಿನತೋಪ ಆಸ್ಪತ್ರೆ ಹಿಂಭಾಗದಲ್ಲಿರುವ ಮನೆ ಸಂಖ್ಯೆ 1715/1,2,3ರ ಅವರ ಸ್ವಗೃಹದಲ್ಲಿ ಇರಿಸಲಾಗಿದೆ.

ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 18-01-2024ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು,
ಅಂಬರ್‌ಕರ್ ಕುಟುಂಬ ವರ್ಗ
ಹಾಗೂ ಸಿಬ್ಬಂದಿ ವರ್ಗ, ಅಂಬರ್‌ಕರ್ ಪಂಪಂಣ
ಮೊ. : 98801 36147, 94802 26277, 94813 63681

ವಿ.ಸೂ. : ದಿನಾಂಕ 18-01-2024ರ ಗುರುವಾರ ನಮ್ಮ ಅಂಗಡಿ 'ಅಂಬರ್‌ಕರ್ ಪಂಪಂಣ' ರಜೆ ಇರುತ್ತದೆ. ನಾಳೆ ಎಂದಿನಂತೆ ಆರಂಭವಾಗುತ್ತದೆ. ಗ್ರಾಹಕರು ಸಹಕರಿಸಬೇಕಾಗಿ ವಿನಂತಿ.

**ಸೈಟುಗಳು ಮಾರಾಟಕ್ಕಿವೆ**
ಶನೇಶ್ವರ ದೇವಸ್ಥಾನದ ಹಿಂಭಾಗ ಕಾಡಪ್ಪನವರ ಲೇಔಟ್‌ನಲ್ಲಿ 30x50, 30x50 South ಅಕ್ಕ-ಪಕ್ಕ, 40 ಅಡಿ ರೋಡಿಗಿದೆ, 30x40 East, 60x40 East, 30x40, 30x40 East ಅಕ್ಕ-ಪಕ್ಕ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ 40x40 South, 30x40 North, 30x50 East, 30x55 South, 30x52 North, 30x45 Corner.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ತಕ್ಷಣ ಬೇಕಾಗಿದ್ದಾರೆ**
ಅನುಭವಿ ಕಂಪ್ಯೂಟರ್ ಆಪರೇಟರ್ ಮತ್ತು ಫೋಟೋಶಾಪ್ ಕೆಲಸಕ್ಕೆ ಮಹಿಳೆಯರು ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು.
95354 37451

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಡ್ರೈವರ್ ಬೇಕಾಗಿದ್ದಾರೆ**
ಸ್ಕೂಲ್ ವ್ಯಾನ್ ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ :
95356 10817
88920 07561

**ಬೇಕಾಗಿದ್ದಾರೆ**
* ಸೇಲ್ಸ್ ಎಕ್ಸಿಕ್ಯೂಟಿವ್
* ಆಫೀಸ್ ಬಾಯ್
ಸಂಪರ್ಕಿಸಿ :
ಮನ್ವಿತ ಎಂಟರ್‌ಪ್ರೈಸಸ್
63620 23451, 97434 37003

**Property Doctor / ಪ್ರಾಪರ್ಟಿ ಡಾಕ್ಟರ್**
(All Works under One Roof)
EC, E-Swathu, Building Licence, Khatha Change, Property Registration, Loan-SBI, Canara + 40 Banks
96325 54524

**ತಕ್ಷಣ ಬೇಕಾಗಿದ್ದಾರೆ**
ಭತ್ತ ಕೊಯ್ಯುವ ಯಂತ್ರ ನೋಡಿಕೊಳ್ಳಲು SSLC & PUC ಓದಿರುವ ಹಿಂದಿ ಭಾಷೆಯುಳ್ಳ ಯುವಕರು ಬೇಕಾಗಿದ್ದಾರೆ. (ಸೂಪರ್ ವೈಸರ್) ಊಟ, ವಸತಿ ಆಕರ್ಷಕ ಸಂಬಳ ಕೊಡಲಾಗುವುದು.
94823 89317

**ಡ್ರೈವರ್ ಬೇಕಾಗಿದ್ದಾರೆ**
ಅಪೇ ಗಾಡಿ ಓಡಿಸಲು ಲೈಸನ್ಸ್ ಉಳ್ಳ ಡ್ರೈವರ್ ಬೇಕಾಗಿದ್ದಾರೆ.
ಸಂಪರ್ಕಿಸಿ :
ಮೊ : 7259635931

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
BIET College Road, Siddaveerappa Badavane, 13th Cross, Davanagere.
bhoomikamatrimony.com
77603 16576
90080 55813

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬಿಲ್ಡಿಂಗ್ ಬಾಡಿಗೆಗೆ ಇದೆ**
ಆಂಜನೇಯ ಬಡಾವಣೆಯ 2ನೇ ಮೇನ್ ರೋಡ್‌ನಲ್ಲಿ ಪಿ.ಜಿ. ನಡೆಸಲು ಸೂಕ್ತವಾದ ಬಿಲ್ಡಿಂಗ್ ಬಾಡಿಗೆಗೆ ಇದೆ.
ಆಸಕ್ತರು ಸಂಪರ್ಕಿಸಿ :
94488 73512

**ನುರಿತ ವೆಜ್ ಅಡುಗೆ ಭಟ್ಟರು ಬೇಕಾಗಿದ್ದಾರೆ**
99453 66847

**ನಿವೇಶನ ಬೇಕಾಗಿದೆ**
ನಗರದ ಜಿ ಎಂ ಐ ಟಿ ಕಾಲೇಜು ಸಮೀಪ, ರಿಂಗ್ ರೋಡ್ ಹತ್ತಿರ ಬಾಪೂಜಿ ಬ್ಯಾಂಕ್ ಸಮುದಾಯ ಭವನ ಹಾಗೂ ವಿದ್ಯಾನಗರ ಸಮೀಪ ಶಾಮನೂರು -ಬೈಪಾಸ್ ಆಸು ಪಾಸು 1 ಎಕರೆ ವಿಸ್ತೀರ್ಣವುಳ್ಳ ಖಾಲಿ ನಿವೇಶನ ಶೈಕ್ಷಣಿಕ ಉದ್ದೇಶಕ್ಕಾಗಿ (ಕಾಲೇಜು) ಬೇಕಾಗಿದೆ. ಖಾಲಿ ನಿವೇಶನದಾರರು ಸಂಪರ್ಕಿಸಿ
72596 72880

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ಜಮೀನು ಮಾರಾಟಕ್ಕೆ ಇದೆ**
ದೊಡ್ಡ ಓಬಜ್ಜಿಹಳ್ಳಿಯಲ್ಲಿ 11 ಗುಂಟೆ ಜಮೀನು ಮಾರಾಟಕ್ಕೆ ಇದೆ.
ಮೊ : 97432 82454

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ಕಾಶಿ ಪ್ರವಾಸ 09.02.2024 ರಿಂದ 19.02.2024ರವರೆಗೆ
ಕಾಶಿ, ಅಯೋಧ್ಯೆ, ಪ್ರಯಾಗರಾಜ್, ಆಗ್ರಾ, ಮಥುರಾ, ದೆಹಲಿ. ಕಾಶಿ ಪ್ರವಾಸಕ್ಕೆ ಕೇವಲ 20 ಸೀಟುಗಳು ಇವೆ. ಆಸಕ್ತಿಯುಳ್ಳವರು ವಿಚಾರಿಸಿ :
94485 33928, 90086 26473

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕ್ಲೀನಿಂಗ್‌ಗೆ ಹುಡುಗ-ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ : 91138 57837

**ಬೇಕಾಗಿದ್ದಾರೆ**
ಬಂಗಾರದ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗ / ಹುಡುಗಿಯರು ಬೇಕಾಗಿದ್ದಾರೆ.
91106 21233

**ಶ್ರೀ ಸಾಯಿ ಕ್ಯಾಟರಿಂಗ್**
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಅಡುಗೆ ಮಾಡಿ ಕೊಡಲಾಗುವುದು.
ಸಂಪರ್ಕಿಸಿ :
94489 24273

**REQUIRED**
Office Boy to Work In Office, Education 8th Standard
Contact:
99000 22030

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಸರ್ವೇ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ವಸತಿ ಸೌಲಭ್ಯವಿದೆ.
ತಕ್ಷಣ ಸಂಪರ್ಕಿಸಿ
81055 03664

**ಗವರ್ನಮೆಂಟ್ ಜಾಬ್ ಸಂಪರ್ಕಿಸಿ**
ಯಾವುದೇ ಸರ್ಕಾರಿ ನೌಕರಿಗಾಗಿ ಪ್ರಯತ್ನಿಸುತ್ತಿರುವ ಯುವಕ, ಯುವತಿಯರು ಅಭ್ಯರ್ಥಿಗಳ ಅನುಕೂಲಕ್ಕಾಗಿ ಸೂಕ್ತ ಸಲಹೆ ಮತ್ತು ಮಾರ್ಗದರ್ಶನಕ್ಕಾಗಿ ಸಂಪರ್ಕಿಸಿ :
80733 42011

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್‌ಕೀಪಿಂಗ್ ಕೆಲಸಕ್ಕೆ ಗಂಡ-ಹೆಂಡತಿ, ದಂಪತಿ ಬೇಕಾಗಿದ್ದಾರೆ. ಸಂಬಳ 20,000/- ಊಟ+ವಸತಿ ಉಚಿತ.
97400 98047

**WANTED**
Personal Secretary - Lady
Receptionist - Lady
79751 07268

**ಬೇಕಾಗಿದ್ದಾರೆ**
* Accountant experienced Tally known and to manage Industrial office.
* Driver cum assistant
ಕೈಗಾರಿಕಾ ಪ್ರದೇಶ, ಲೋಕಿಕೆರೆ ರಸ್ತೆ, ದಾವಣಗೆರೆ.
ವಾಟ್ಸಾಪ್ ರೆಸ್ಯೂಮ್ & ಕರೆ ಮಾಡಿ:
99863 66358

**2 BHK FLAT FOR SALE**
1250 Sq. ft., 2 Balconies. 2nd Floor, Lift and Power-back Present.
Location : Shankuntala Park View, MCC 'B' Block, 7th Main, Davanagere.
CONTACT- WhatsApp only to
+91- 9742521922

**SRI BABA RAMDEV**
**FAMILY RESTAURANT**
(North Indian Pure Veg)
*Hotel Shoven ( Kini Towers)*
Near D.C office, P.B Road,Davangere.
M : 9972984314

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710


## ನಗರದಲ್ಲಿ ಇಂದು ಉಪನ್ಯಾಸ

ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಇಂದು ಮಧ್ಯಾಹ್ನ 3.30 ಕ್ಕೆ ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ ಸಭಾಂಗಣದಲ್ಲಿ ವಿವೇಕ್ ಪೋಷಕರ ಆರೋಗ್ಯ ಕಾರ್ಯಾಗಾರದಡಿಯಲ್ಲಿ 'ಹೆಚ್ಚುತ್ತಿರುವ ಮಧುಮೇಹ ರೋಗ (ಸಕ್ಕರೆ ಕಾಯಿಲೆ) ಆತಂಕ ಬೇಡ. ಅರಿವಿರಲಿ' ಎಂಬ ವಿಷಯದ ಮೇಲೆ ಡಾ. ಮಲ್ಲಿಕಾರ್ಜುನ್ ಮಾತನಾಡಲಿದ್ದಾರೆ ಎಂದು ಸಂಸ್ಥೆಯ ನಿರ್ದೇಶಕ ಡಾ. ಜಿ. ಗುರುಪ್ರಸಾದ್ ತಿಳಿಸಿದ್ದಾರೆ.

## ಅಯೋಧ್ಯೆ ಟ್ರಸ್ಟ್‌ಗೆ ಹಸ್ತಾಂತರ

**(1ನೇ ಪುಟದಿಂದ)**'ದೋ ಧಾಗೆ ಶ್ರೀ ರಾಮ್ ಕೆ ಲೆಯೆ' ಎಂಬ ಅಭಿಯಾನದ ಮೂಲಕ ಲಕ್ಷಾಂತರ ನೇಕಾರರು ಶ್ರೀರಾಮ ದೇವರಿಗೆ ವಸ್ತ್ರಗಳನ್ನು ಹೆಣೆಯುವ ಕಾರ್ಯದಲ್ಲಿ ಕೈ ಜೋಡಿಸಿದ್ದರು. ಈ ಬಟ್ಟೆಗಳನ್ನು ಟ್ರಸ್ಟ್‌ಗೆ ಹಸ್ತಾಂತರಿಸಿರುವ ಉತ್ತರ ಪ್ರದೇಶದ ಮುಖ್ಯ ಮಂತ್ರಿ ಯೋಗಿ ಆದಿತ್ಯನಾಥ್ 12 ಲಕ್ಷ ಕುಶಲಕರ್ಮಿಗಳು ಈ ಭಕ್ತಿಯ ಎಳೆಗಳೊಂದಿಗೆ ಬಟ್ಟೆ ನೇಯ್ದಿದ್ದಾರೆ ಎಂದು ಹೇಳಿದರು

# 78ರ ಸಂಭ್ರಮದಲ್ಲಿ ಅಥಣಿ ಎಸ್. ವೀರಣ್ಣ



ದಾವಣಗೆರೆಯ ಪ್ರಮುಖರಲ್ಲೊಬ್ಬರೂ, ವೀರಶೈವ ಲಿಂಗಾಯತ ಸಮಾಜದ ಹಿರಿಯ ಮುಖಂಡರೂ, ಲೆಕ್ಕ ಪರಿಶೋಧಕರೂ, ಕೈಗಾರಿಕೋದ್ಯಮಿಗಳೂ ಆದ ಡಾ. ಅಥಣಿ ವೀರಣ್ಣ ಅವರಿಗೀಗ 78ನೇ ವರ್ಷದ ಸಂಭ್ರಮ.

ಜೀವನ ಸುಮಧುರವಾಗಿರಬೇಕು, ಸಾತ್ವಿಕವಾಗಿ ರಬೇಕು, ಕ್ರಿಯಾಶಾಲಿತ್ವದಿಂದ ಕೂಡಿರಬೇಕು, ಜೊತೆಗೆ ಸದಾ ಹುಡುಕಾಟವಿರಬೇಕು, ಹುಡುಕಾಟದಲ್ಲಿ ವಿಶೇಷತೆಯ ಗುರಿ ಇರಬೇಕು, ತಲುಪಿದ ಗುರಿ ನಾಲ್ಕು ಜನರಿಗೆ ಉಪಯುಕ್ತ ಮಾದರಿಯಾಗಿರಬೇಕು, ಬದುಕಲು ಒಂದು ವೃತ್ತಿ ಇರಬೇಕು, ಬದುಕಿನ ವಿಕಾಸಕ್ಕೆ ಏನಾದರೂ ಒಳ್ಳೆಯ ಪ್ರವೃತ್ತಿ ಇರಬೇಕು, ವೃತ್ತಿ-ಪ್ರವೃತ್ತಿಗಳನ್ನು ಸಮನ್ವಯಗೊಳಿಸಿಕೊಂಡರೆ ಬದುಕು ಬಂಗಾರವಾಗುತ್ತದೆ, ಹೀಗೆ ತಮ್ಮ ಬದುಕನ್ನು ಸಮನ್ವಯಗೊಳಿಸಿಕೊಂಡಿದ್ದಾರೆ.

ವಿವಿಧ ಕ್ಷೇತ್ರಕ್ಕೆ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆ. ಸದಾ ಏನಾದರೂ ನೂತನ-ನವ ಚೇತನ ಕೆಲಸಗಳನ್ನು ಮಾಡುತ್ತಲೇ ಇರುತ್ತಾರೆ. ಆದರೆ ಯಾವುದೇ ಅಬ್ಬರದ ಆಮಿಷಕ್ಕೆ ಒಳಗಾಗದೆ, ಪ್ರಚಾರ ಪ್ರಿಯತೆಯಿಂದ ದೂರವಿದ್ದು ತಮ್ಮಷ್ಟಕ್ಕೆ ತಾವು ಸ್ಥಿತಪ್ರಜ್ಞತೆಯ ಮನೋಭಾವನೆಯಿಂದ ಒಂದು ಸಣ್ಣ ಮುಗುಳು ನಗೆಯಿಂದ ಸರಳ ವ್ಯಕ್ತಿಯಾಗಿ ಬಿಡುತ್ತಾರೆ. ಇವರ ಯಶಸ್ಸಿನ ಹಿಂದೆ ಶ್ರೀಮತಿ ಶೀಲಾ ವೀರಣ್ಣ ಅಥಣಿ ಅವರ ಪರಿಶ್ರಮ ಅಪಾರವಾದದ್ದು.

ದಾವಣಗೆರೆಯ ನಾಗರಿಕ ಬದುಕಿನ ಕಾರ್ಯಕ್ಷೇತ್ರಗಳಲ್ಲಿ ತಮ್ಮನ್ನು ಸಮರ್ಪಣಾ ಭಾವದಿಂದ ಅರ್ಪಿಸಿಕೊಂಡು, ದುಡಿಯುತ್ತಿರುವ ಪ್ರಮುಖ ಮಹಾನ್ ವ್ಯಕ್ತಿಗಳ ಸಾಲಿನಲ್ಲಿ ಅಥಣಿ ವೀರಣ್ಣ ಅವರು ಒಬ್ಬರಾಗಿದ್ದಾರೆ. ಅವರು ಎಲ್ಲರಿಗೂ ಪರಿಚಿತರು, ಅವರೊಂದು ವಿಶಾಲವಾದ ಆಲದ ಮರ, ಸಾವಿರಾರು ಜನರ ಬಾಳಿಗೆ ಬೆಳಕಾಗಿ ಮಾನವೀಯತೆಯಿಂದ ಸೇವೆ ಸಲ್ಲಿಸುವ ಹಾಗೂ ಎಲ್ಲಾ ಕ್ಷೇತ್ರಗಳಲ್ಲಿ ಅನುಭವ ಪಡೆದಿದ್ದಾರೆ. ಸರಳ ಸಜ್ಜನಿಕೆಗೆ ಹೆಸರಾದ ಇವರು ಎಲ್ಲರ ಜೊತೆಯಲ್ಲೂ ಸ್ನೇಹ, ಅಭಿಮಾನ ಹೊಂದಿರುವವರು, 'ಸೋಲು ಗೆಲುವಿಗೆ ನಾಂದಿ' ಎಂದು ಎಲ್ಲರಲ್ಲೂ ಚೈತನ್ಯ ತುಂಬುತ್ತಾರೆ, ತಮ್ಮ ಬಳಿ ಬಂದು ಕಷ್ಟ ಸುಖಗಳನ್ನು ಹೇಳಿಕೊಂಡವರಿಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡುತ್ತಾ, ತಮ್ಮ ಕೈಲಾದ ಸಹಾಯ ಮಾಡುತ್ತಾ ಬರುತ್ತಿದ್ದಾರೆ. ನಮ್ಮವರು ಎತ್ತರಕ್ಕೆ ಬೆಳೆಯಬೇಕು, ಉನ್ನತ ಸ್ಥಾನ ಪಡೆಯಬೇಕು ಎಂದು ಬಯಸುತ್ತಾರೆ.

ಬಹುಮುಖ ಪ್ರತಿಭೆಯ ವೀರಣ್ಣನವರು ಪ್ರಖ್ಯಾತ ಲೆಕ್ಕಪರಿಶೋಧಕರಾಗಿದ್ದು, ಪ್ರವೃತ್ತಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಮಾಜ ಸೇವಕರಾಗಿದ್ದು, ಧಾರ್ಮಿಕ ಕ್ಷೇತ್ರದಲ್ಲೂ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಗುಡ್ಡಾಪುರ ಶ್ರೀ ದಾನಮ್ಮ ದೇವಿಯ ಪರಮ ಭಕ್ತರು. ನಗರದ ಶ್ರೀ ಗುರು ಬಕೇಶ್ವರ ಸ್ವಾಮಿಯ, ದುರ್ಗಾ ಮಾತೆಯ ಭಕ್ತರು, ಶ್ರೀ ವೀರಭದ್ರೇಶ್ವರನಲ್ಲಿ ಅಪಾರ ಭಕ್ತಿ ಹೊಂದಿದ್ದು ವಾರಕ್ಕೊಮ್ಮೆಯಾದರೂ ವಿವಿಧ ದೇವಸ್ಥಾನಗಳಿಗೆ ಭೇಟಿ ನೀಡುತ್ತ ಆಗಾಗ ಪುಣ್ಯಕ್ಷೇತ್ರಗಳಿಗೆ ಭೇಟಿ ನೀಡುತ್ತಾ ಧಾರ್ಮಿಕ ಶ್ರದ್ಧೆಯುಳ್ಳವರಾಗಿದ್ದಾರೆ. ಇವರ ಧಾರ್ಮಿಕ ಪ್ರತಿಭೆಗೆ ದಾರಿದೀಪವಾಗಿದ್ದಾರೆ.

ವಿವಿಧ ದೇಶಗಳನ್ನು ಸುತ್ತಿ ಅಪಾರ ಜ್ಞಾನ ಸಂಪಾದನೆ ಮಾಡಿದ್ದಾರೆ. ಇವರ ಸಾಧನೆಗೆ 'ಗೌರವ ಡಾಕ್ಟರೇಟ್' ಪದವಿ, 'ವಾಣಿಜ್ಯ ರತ್ನ' ಪ್ರಶಸ್ತಿ ಪುರಸ್ಕಾರ, 'ವೀರಶೈವ ಸಿರಿ' ಪ್ರಶಸ್ತಿ ಹೀಗೆ ಹತ್ತಾರು ಉನ್ನತ ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ.

ಅಥಣಿ ವೀರಣ್ಣ ಕುರಿತು ಎಂ.ಕೆ.ಬಕ್ಕಪ್ಪ ಅವರು ರಚಿಸಿರುವ ಅಥಣಿ ವೀರಣ್ಣನವರ ಜೀವನದ ಯಶೋಗಾಥೆ 'ಹಸನ್ಮುಖಿ' ಎಂಬ ಕೃತಿ ಪ್ರಕಟಿಸಿರುವುದು ದಾವಣಗೆರೆಯ ಸಾಹಿತ್ಯ ವಲಯದಲ್ಲಿ ಒಂದು ವಿಶೇಷ ಪ್ರಯೋಗ. ಈ ಕೃತಿ ಯುವ ಜನತೆಗೆ, ಸಮಾಜಕ್ಕಾಗಿ ದುಡಿಯುವ ಮಹನೀಯರಿಗೆ ತ್ಯಾಗ, ಕರ್ತವ್ಯ, ಪರತೆಗಳಿಗೆ ಸಾಕ್ಷಿಯಾಗಿ, ಭವಿಷ್ಯತ್ತಿನಲ್ಲಿ ಮಾತನಾಡುವ ಮೈಲಿಗಲ್ಲುಗಳಾಗುತ್ತವೆ. ಈ ಕೃತಿಯನ್ನು ಕೂಡ ಎಲ್ಲಿ ಪ್ರಚಾರ ಮಾಡದೇ ಸಾರ್ವಜನಿಕವಾಗಿ ಬಿಡುಗಡೆಗೊಳಿಸದೇ ಪ್ರಚಾರದಿಂದ ಬಹು ದೂರವಿದ್ದು, ನಿರ್ಲಿಪ್ತ ಸ್ವಭಾವ ಹಾಗೂ ತೂಕಬದ್ಧ ವ್ಯಕ್ತಿತ್ವ ರೂಢಿಸಿಕೊಂಡಿದ್ದಾರೆ.

ವೃತ್ತಿ ಜೀವನ, ಕೌಟುಂಬಿಕ ಜೀವನ, ಧಾರ್ಮಿಕ ಜೀವನ ಹಾಗೂ ಸಾಮಾಜಿಕ ಜೀವನ ಎಲ್ಲದರಲ್ಲಿಯೂ ಸಂತೃಪ್ತಿ ಜೀವನ ಅಥಣಿ ವೀರಣ್ಣ ಅವರದು, ಅಲ್ಲದೇ ಶೈಕ್ಷಣಿಕ, ಕೈಗಾರಿಕಾ ಕ್ಷೇತ್ರಗಳಲ್ಲೂ ಅವರು ಸಲ್ಲಿಸುತ್ತಿರುವ ಸೇವೆ ಅನುಪಮವಾದದ್ದು.

**- ಜಂಬಿಗಿ ಮೃತ್ಯುಂಜಯ,**
ಕನ್ನಡ ಉಪನ್ಯಾಸಕರು, ದಾವಣಗೆರೆ.

# ಲೋಕಸಭೆಯಲ್ಲಿ ಭರ್ಜರಿ ಜಯವಾದರೆ ಸಿದ್ದರಾಮಯ್ಯ ಪೂರ್ಣಾವಧಿ ಸಿಎಂ



ಬೆಂಗಳೂರು, ಜ.17- ಲೋಕಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಭರ್ಜರಿ ಜಯ ತಂದುಕೊಟ್ಟರೆ, ಸಿಎಂ ಸಿದ್ದರಾಮಯ್ಯ ಪೂರ್ಣಾವಧಿ ಅಧಿಕಾರದಲ್ಲಿ ಇರುತ್ತಾರೆ ಎಂದು ಅವರ ಪುತ್ರ ಹಾಗೂ ಮಾಜಿ ಶಾಸಕ ಡಾ.ಯತೀಂದ್ರ ತಿಳಿಸಿದ್ದಾರೆ. ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿ ಮಾತನಾಡಿದ ಅವರು, ನೀವು ನಮ್ಮ ತಂದೆಯವರಿಗೆ ಬೆನ್ನೆಲುಬಾಗಿ ನಿಂತಿದ್ದರಿಂದ ಎರಡು ಬಾರಿ ಮುಖ್ಯಮಂತ್ರಿ ಆಗಲು ಸಾಧ್ಯವಾ ಯಿತು. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಅದೇ ರೀತಿ ಕಾಂಗ್ರೆಸ್‌ಗೆ ಬೆಂಬಲ ನೀಡಿ, ನಮ್ಮ ತಂದೆಯವರ ಕೈಬಲಪಡಿಸಿ ಎಂದು ಮನವಿ ಮಾಡಿದ್ದಾರೆ.

ಈ ಮನವಿಯೇ ಕಾಂಗ್ರೆಸ್‌ನಲ್ಲಿ ದೊಡ್ಡ ಚರ್ಚೆಗೆ ಗ್ರಾಸವಾಗಿದೆ. ಇದುವರೆಗೂ ಕೆಲವು ಸಚಿವರು ಸಿದ್ದರಾಮಯ್ಯ ಅವರೇ ಐದು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಅಧಿಕಾರದಲ್ಲಿ ಇರುತ್ತಾರೆಂದು ಹೇಳಿಕೆ ನೀಡಿದ್ದರು.

ಆದರೆ, ಇದೀಗ ಅವರ ಪುತ್ರನೇ ಇಂತಹ ಹೇಳಿಕೆ ಸಾರ್ವಜನಿಕವಾಗಿ ನೀಡಿರುವುದು ಚುನಾವಣೆಯ ದೂರದೃಷ್ಟಿಯಿಂದಲೋ ಅಥವಾ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಟಾಂಗ್ ಕೊಡಲೋ ಎಂಬ ಬಗ್ಗೆ ಚರ್ಚೆ ನಡೆದಿದೆ.

ಯತೀಂದ್ರ ನೀಡಿದ ಹೇಳಿಕೆ ಬೆನ್ನಲ್ಲೇ ಉಪಮುಖ್ಯಮಂತ್ರಿಯಾಗಿರುವ ಕೆಪಿಸಿಸಿ ಅಧ್ಯಕ್ಷ ಶಿವಕುಮಾರ್, ಯತೀಂದ್ರ ಅವರು ಜವಾಬ್ದಾರಿಯುತ ನಾಯಕ. ತಮಗೆ ಶಕ್ತಿ ನೀಡುವಂತೆ ಜನರನ್ನು ಕೇಳುವುದು ಸ್ವಾಭಾವಿಕ. ಅವರ ಹೇಳಿಕೆ ತಿರುಚುವ ಅಗತ್ಯವಿಲ್ಲ ಎಂದಿದ್ದಾರೆ.

ನಮ್ಮ ಸರ್ಕಾರ ಐದು ವರ್ಷ ಬಲಿಷ್ಠವಾಗಿರುತ್ತದೆ. ಸಿದ್ದರಾಮಯ್ಯ ಅವರು ಈಗ ನಮ್ಮ ಮುಖ್ಯಮಂತ್ರಿ. ಅವರು ನಾಯಕರಾಗಿ, ನಾನು ಪಕ್ಷದ ಅಧ್ಯಕ್ಷನಾಗಿ ಇಬ್ಬರೂ ಲೋಕಸಭಾ ಚುನಾವಣೆ ಎದುರಿಸುತ್ತೇವೆ ಎಂದು ಹೇಳಿದರು. ಅವರ ನಾಯಕತ್ವದಲ್ಲೇ ಚುನಾವಣೆ ನಡೆಯಲಿದೆ, ಅದರಲ್ಲಿ ಅನುಮಾನವಿಲ್ಲ. ಆಸೆ ಪಡುವುದು ಸಹಜ. ಈ ಸಂದರ್ಭದಲ್ಲಿ ಜನರಿಗೆ ಶಕ್ತಿ ನೀಡುವಂತೆ ಕೇಳುವುದರಲ್ಲಿ ತಪ್ಪೇನಿದೆ? ಎಂದು ಪ್ರಶ್ನಿಸಿದ್ದಾರೆ.

## ಸೇಫ್ ಲಾಕರ್‌ನಲ್ಲಿದ್ದ ಹಣ ಕಳ್ಳತನ: ಆರೋಪಿ ಬಂಧನ

ದಾವಣಗೆರೆ, ಜ. 17- ಸೇಫ್ ಲಾಕರ್‌ನಲ್ಲಿದ್ದ ಹಣ ಕಳ್ಳತನ ಪ್ರಕರಣ ಬೆಳಕಿಗೆ ಬಂದ 12 ಗಂಟೆಯೊಳಗೆ ಪೊಲೀಸರು ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಯರವನಾಗತಿಹಳ್ಳಿಯ ಕಿರಣ ಕುಮಾರ್ ಕೆ.ಬಿ. (26) ಬಂಧಿತ ಆರೋಪಿ. ಈತನಿಂದ ಕಳ್ಳತನವಾಗಿದ್ದ 10,88,440 ರೂ.ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿರುವ ಕ್ರೆಡಿಟ್ ಆಕ್ಸಿಸ್ ಗ್ರಾಮೀಣ ಲಿಮಿಟೆಡ್ (ಗ್ರಾಮೀಣ ಕೂಟ ಸ್ಮಾಲ್ ಫೈನಾನ್ಸ್) ಕಛೇರಿಯಲ್ಲಿನ ಲಾಕರ್‌ನಲ್ಲಿದ್ದ ಹಣ ಕಳ್ಳತನವಾದ ಬಗ್ಗೆ ಅವಿನಾಶ್ ಎಂಬುವವರು ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ಜ.16ರಂದು ದೂರು ನೀಡಿದ್ದರು.

ನಗರ ಉಪ ವಿಭಾಗದ ಪೊಲೀಸ್ ಉಪಾಧೀಕ್ಷಕ ಮಲ್ಲೇಶ್.ಡಿ, ಕೆಟಿಜೆ ನಗರ ಪೊಲೀಸ್ ಠಾಣೆ ಪೊಲೀಸ್ ನಿರೀಕ್ಷಕ ಶಶಿಧರ ಯು.ಜೆ, ಪಿಎಸ್‌ಐಗಳಾದ ಸಾಗರ್ ಅತ್ತರವಾಲಾ, ಮಂಜುಳ, ಕೆಟಿಜೆ ನಗರ ಪೊಲೀಸ್ ಠಾಣೆ ಅಪರಾಧ ವಿಭಾಗದ ಸಿಬ್ಬಂದಿಗಳಾದ ಪ್ರಕಾಶ ಟಿ, ಶಂಕರ್ ಆರ್.ಜಾಧವ್, ತಿಮ್ಮಣ್ಣ ಎನ್.ಆರ್, ಮಂಜಪ್ಪ ಎಂ, ಷಣ್ಮುಖ ಕೆ, ಶಿವರಾಜ ಎಂ.ಎಸ್., ರವಿ ಲಂಬಾಣಿ, ರಾಘವೇಂದ್ರ, ಶಾಂತರಾಜ್ ಪ್ರಕರಣದ ಪತ್ತೆಯಲ್ಲಿ ಪಾಲ್ಗೊಂಡಿದ್ದರು.


**ಮನೆ ಬಾಡಿಗೆಗೆ ಇದೆ**
ಫಸ್ಟ್ ಫ್ಲೋರ್ ಸಿಂಗಲ್ ಬೆಡ್ ರೂಮ್ ಮನೆ ಖಾಲಿ ಇದೆ. ಬಾಟ್ಲಿ ಬಿಲ್ಡಿಂಗ್ ಹಿಂಭಾಗ SS 'A' Block. ದಾವಣಗೆರೆ - 04.
98446 32426

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**WE ARE HIRING**
Opening In Back Office Work, No Of Post - 2, Good Communication Skill and Excel Knowledge. Female Candidates Only. Davanagere.
94822 57570

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
88920 08800

**ಕೆಲಸಕ್ಕೆ ಬೇಕಾಗಿದ್ದಾರೆ**
ಸಂಕೇಶ್ವರ ಇಂಡಸ್ಟ್ರೀಸ್, ಕರೂರ್ ಇಂಡಸ್ಟ್ರೀಯಲ್ ಏರಿಯಾ , ದಾವಣಗೆರೆ, ಹುಡುಗರು ಹೆಲ್ಪರ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
99018 69371
91481 88927

**'ಮಚ್ಚಿ' ಫಿಶ್ ಫ್ರೈ ಹೋಟೆಲ್**
ಸಮುದ್ರದ ತಾಜಾ ಮೀನುಗಳನ್ನು ಮಂಗಳೂರು ಶೈಲಿಯಲ್ಲಿ ತವಾ ಫ್ರೈ ಮಾಡಲಾಗುತ್ತದೆ. ಹಳೇ ಬೆತೂರು ರಸ್ತೆ, ಶ್ಯಾವಿಗೆ ಮೆಶಿನ್ ಹತ್ತಿರ, ದಾವಣಗೆರೆ.
63646 78760

**ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ**
ಎಸ್.ಎಸ್. ಹೈಟೆಕ್ ಆಸ್ಪತ್ರೆ ಹಿಂಭಾಗ.
72045 77823

**ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ**
**Famous Astrologer**
No. 1 ವಶೀಕರಣ ಸ್ಪೆಷಲಿಸ್ಟ್
ನೀವು ಇಷ್ಟಪಟ್ಟವರು ನಿಮ್ಮಂತಾಗಲು, ಮದುವೆ ವಿಳಂಬ, ದಾಂಪತ್ಯ ಸ್ತ್ರೀ-ಪುರುಷ ವಶೀಕರಣ, ನಿಮ್ಮ ಯಾವುದೇ ಸಮಸ್ಯೆಗಳನ್ನು 100% ಪರಿಹಾರ ಶತಃ ಸಿದ್ಧ.
ಜಿ. ವೀರೇಶ್‌ರಾವ್ ಶಾಸ್ತ್ರಿ
ಮನೆ, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ
89716 99826

**ಬೇಕಾಗಿದ್ದಾರೆ**
ಪ್ರತಿಷ್ಠಿತ MNC ಕಂಪನಿಯಲ್ಲಿ ITI ಎಲೆಕ್ಟ್ರಿಕಲ್ / ಎಲೆಕ್ಟ್ರಾನಿಕ್ಸ್ ಪಾಸಾದ ಯುವಕರು ಬೇಕಾಗಿದ್ದಾರೆ. ಆಕರ್ಷಕ ಸಂಬಳ PF & ESI ಯೊಂದಿಗೆ. ಸಂಪರ್ಕಿಸಿ :
88612 63402
93437 05350

**ನೇರ ಪರೀಕ್ಷೆಗಳು**
SSLC , PUC
NTC - ನರ್ಸರಿ ಟೀಚರ್ಸ್ ಟ್ರೇನಿಂಗ್
BA, B.Com, MA, M.Com, MBA (ALL),
ಶ್ರೀ ಗಂಗೋತ್ರಿ ಕರಸ್ಪಾಂಡೆನ್ಸ್ ಕಾಲೇಜ್
ಮೋತಿ ಸ್ವೀಟ್ಸ್/ ಟ್ರೆಂಡ್ಸ್ ಪಕ್ಕ, ಪಿ.ಬಿ. ರಸ್ತೆ, ದಾವಣಗೆರೆ
86602 35013

**ಹೆಸರು ಸ್ಪಷ್ಟೀಕರಣ**
ಶ್ರೀಮತಿ ಶಕುಂತಲ ಕೋಂ ಹುಚ್ಚಪ್ಪ ಎ.ಹೆಚ್. ವಯಸ್ಸು 68 ವರ್ಷ ಮನೆ ನಂ. 44/13, 1ನೇ ಮೇನ್, 9ನೇ ಕ್ರಾಸ್, ಸರಸ್ವತಿ ನಗರ, 'ಎ' ಬ್ಲಾಕ್ ವಾಸಿಯಾದ ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುತ್ತೇನೆ. ನನ್ನ ಆಧಾರ್ ಕಾರ್ಡ್‌ನಲ್ಲಿ ನನ್ನ ಹೆಸರು ಶಕುಂತಲ ಬಿನ್ ಚನ್ನಬಸಪ್ಪ ಎಂದು ನಮೂದಾಗಿದ್ದು, ಪಾನ್ ಕಾರ್ಡ್‌ನಲ್ಲಿ ಶಕುಂತಲ ಬಿನ್ ಚನ್ನಬಸಪ್ಪ ಎಂದು ನಮೂದಾಗಿರುತ್ತದೆ. ನನ್ನ ಮನೆಯ ಕ್ರಯಪತ್ರದಲ್ಲಿ ನನ್ನ ಹೆಸರು ಲೇಟ್ ಚನ್ನಬಸಪ್ಪನವರ ಮಗಳು ಶಕುಂತಲಮ್ಮ ಎಂದು ನಮೂದಾಗಿರುತ್ತದೆ. ಮೇಲ್ಕಂಡ ಮೂರೂ ಹೆಸರುಗಳು ನನ್ನವೇ ಎಂದು ದಿನಾಂಕ 11.1.2024ರಂದು ದಾವಣಗೆರೆ ನೋಟರಿಯವರ ಸಮ್ಮುಖದಲ್ಲಿ ಪ್ರಮಾಣೀಕರಿಸುತ್ತೇನೆ. - ಶ್ರೀಮತಿ ಶಕುಂತಲ

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
89048 09492

**ಬೇಕಾಗಿದ್ದಾರೆ**
ಕಿರಾಣಿ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು / ಹುಡುಗಿಯರು ಬೇಕಾಗಿದ್ದಾರೆ.
ಪಾರ್ಟ್ ಟೈಮ್ / ಫುಲ್ ಟೈಮ್.
ಮನೆ ಬಾಡಿಗೆಗೆ ಇದೆ 2BHK.
87489 10050, 83173 43604

**ಜಮೀನು ಕೊಳ್ಳಲು ಬೇಕಾಗಿರುತ್ತದೆ**
(1 ಎಕರೆ to 20 ಎಕರೆ)
ದಾವಣಗೆರೆ ಹತ್ತಿರ.
Sharma
63608 66997

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ



**ಶುಭಾಶಯ ಹಾಗೂ ಅಭಿನಂದನೆಗಳು**
ಎಸ್.ಆರ್.ವಿ. ಸಮೂಹ ಸಂಸ್ಥೆಗಳ ಸಂಸ್ಥಾಪಕರು, ಜಿಲ್ಲಾ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಸಂಘದ ಅಧ್ಯಕ್ಷರು,
ಶ್ರೀ ವೀರಮಾಹೇಶ್ವರ ಕೋ-ಆಪ್ ಸೊಸೈಟಿಯ ಅಧ್ಯಕ್ಷರು ಹಾಗೂ ವೀರಶೈವ ಜಂಗಮ ಸಮಾಜದ ಮುಖಂಡರಾದ

**ಶ್ರೀಯುತ ತ್ಯಾವಣಗಿ ವೀರಭದ್ರಸ್ವಾಮಿ**
ಇವರಿಗೆ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು.
ಹಾಗೂ ಬಿಜೆಪಿ ಜಿಲ್ಲಾ ಅಧ್ಯಕ್ಷರಾಗಿ ಆಯ್ಕೆಯಾದ
**ಶ್ರೀಯುತ ಎನ್. ರಾಜಶೇಖರ್ ನಾಗಪ್ಪ**

ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.
✦ ದಾವಣಗೆರೆ ಜಿಲ್ಲಾ ಶಾಶ್ವತ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳ ಸಂಘ (ರಿ.)
✦ ಮಾನವ ಧರ್ಮ ಕಲ್ಯಾಣ ಟ್ರಸ್ಟ್‌ನ ಪದಾಧಿಕಾರಿಗಳು
✦ ವಿಚಾರಲೇಖ ಪತ್ರಿಕಾ ಬಳಗ ✦ ಕೋಟೆಹಾಳ್ ಸಿದ್ದೇಶ್
✦ ಮಲ್ಲಯ್ಯ, ಪ್ರಾಧ್ಯಾಪಕರು, ಸಂತೇಬೆನ್ನೂರು ಸ.ಪ್ರ. ಕಾಲೇಜು
✦ ಮಂಜುನಾಥಸ್ವಾಮಿ, ಸಂಸ್ಥಾಪಕರು, ಎಸಿಎಂ ಸ್ಕೂಲ್ ✦ ವಿರೂಪಾಕ್ಷಯ್ಯ ಎಂ.ಎಸ್., ನಿವೃತ್ತ ಪಿಡಿಓ
✦ ನೂರೊಂದಯ್ಯ ✦ ಚೇತನ್‌ಕುಮಾರ್ ✦ ಚಿದಾನಂದಸ್ವಾಮಿ ✦ ನಾಗಭೂಷಣ್ ✦ ವಿನಯಾರಾಧ್ಯ

## ಸಂಕ್ಷಿಪ್ತ ಸುದ್ದಿ

**ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಅಂತಿಮ ವೇಳಾಪಟ್ಟಿ ಪ್ರಕಟ**
ಬೆಂಗಳೂರು: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು 2024ನೇ ಸಾಲಿನ ಎಸ್‌ಎಸ್‌ಎಲ್ ಸಿ ಮತ್ತು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಅಂತಿಮ ವೇಳಾಪಟ್ಟಿಯನ್ನು ಬುಧವಾರ ಪ್ರಕಟಿಸಿದೆ. ಮಾರ್ಚ್ 25ರಿಂದ ಏಪ್ರಿಲ್ 6ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ನಡೆಯಲಿದ್ದು, ಮಾರ್ಚ್ 1ರಿಂದ ಮಾರ್ಚ್ 22ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆ ನಡೆಯಲಿದೆ.

**ಸಾಲದ ಸುಳಿಯಲ್ಲಿ ಭಾರತ : ಖರ್ಗೆ**
ನವದೆಹಲಿ : ಮೋದಿ ಸರ್ಕಾರದ ನೀತಿಗಳ ಕಾರಣದಿಂದ ಭಾರತ ಸಾಲದ ಸುಳಿಯಲ್ಲಿ ಸಿಲುಕಿದೆ. ಜಾಹೀರಾತುಗಳ ಪ್ರಹಸನದ ಮೂಲಕ ಈ ವಿಷಯವನ್ನು ಮುಚ್ಚಿಡಲಾಗದು ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

**ಜ.22ರ ನಂತರ ಅಯೋಧ್ಯೆಗೆ ಕೇಜ್ರಿವಾಲ್ ಭೇಟಿ**
ನವದೆಹಲಿ : ಜನವರಿ 22ರಂದು ಅಯೋಧ್ಯೆಯ ರಾಮ ಮಂದಿರದ ಪ್ರಾಣ ಪ್ರತಿಷ್ಠಾಪನೆ ಪೂರ್ಣಗೊಂಡ ನಂತರ ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸುವುದಾಗಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

**ಸಿ.ಪಿ.ಆರ್. ವಿದೇಶಿ ದೇಣಿಗೆ ಅನುಮತಿ ರದ್ದು**
ನವದೆಹಲಿ : ಸೆಂಟರ್ ಫಾರ್ ಪಾಲಿಸಿ ರೀಸರ್ಚ್ (ಸಿ.ಪಿ.ಆರ್.) ಸಂಸ್ಥೆಗೆ ನೀಡಲಾಗಿದ್ದ ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯ ಅನುಮತಿಯನ್ನು ಕೇಂದ್ರ ಗೃಹ ಸಚಿವಾಲಯ ರದ್ದುಗೊಳಿಸಿದೆ. ವಿದೇಶಿ ದೇಣಿಗೆಯನ್ನು ದುರ್ಬಳಕೆ ಮಾಡಿಕೊಂಡ ಹಾಗೂ ಅಭಿವೃದ್ಧಿ ಯೋಜನೆಗಳ ವಿರುದ್ಧದ ಕಾನೂನು ಹೋರಾಟಗಳಿಗೆ ಹಣ ನೀಡಿದ ಆರೋಪದ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

**ಅಕ್ರಮ ಹಣ : ಹೂಡಾ ವಿಚಾರಣೆ**
ನವದೆಹಲಿ : ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಹರಿಯಾಣದ ಮಾಜಿ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಹಿರಿಯ ನಾಯಕ ಭೂಪಿಂದರ್ ಸಿಂಗ್ ಹೂಡಾ ಅವರನ್ನು ಜಾರಿ ನಿರ್ದೇಶನಾಲಯ ವಿಚಾರಣೆಗೆ ಒಳಪಡಿಸಿದೆ.

**ಈ ವರ್ಷ ಶೇ.7ರ ಆರ್ಥಿಕ ಬೆಳವಣಿಗೆ**
ದಾವೋಸ್ : ಭಾರತದ ಆರ್ಥಿಕ ವ್ಯವಸ್ಥೆ ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ.7ರಷ್ಟು ಬೆಳೆಯಲಿದೆ. ಈ ವರ್ಷ ಹಣದುಬ್ಬರ ಪ್ರಮಾಣ ಮತ್ತಷ್ಟು ತಗ್ಗಲಿದೆ ಎಂದು ಆರ್.ಬಿ.ಐ. ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

**ಇರಾನ್‌ನಿಂದ ಪಾಕ್ ರಾಯಭಾರಿಗಳು ವಾಪಸ್**
ಇಸ್ಲಮಾಬಾದ್ : ಪಾಕಿಸ್ತಾನದ ಮೇಲೆ ಇರಾನ್ ಕ್ಷಿಪಣಿ ಹಾಗೂ ಡ್ರೋನ್ ದಾಳಿ ನಡೆಸಿದೆ. ಈ ಹಿನ್ನೆಲೆಯಲ್ಲಿ ಇರಾನ್‌ನಿಂದ ತನ್ನ ರಾಯಭಾರಿಗಳನ್ನು ಪಾಕಿಸ್ತಾನ ವಾಪಸ್ ಕರೆಸಿಕೊಂಡಿದೆ. ಎಲ್ಲಾ ಉನ್ನತ ಹಂತದ ದ್ವಿಪಕ್ಷೀಯ ಭೇಟಿಗಳಿಗೆ ತಡೆ ಹಾಕಿದೆ.

**ಪಾಕ್‌ಗೆ 700 ದಶಲಕ್ಷ ಡಾಲರ್ ಸಾಲ ಬಿಡುಗಡೆ**
ಇಸ್ಲಾಮಾಬಾದ್ : ಹಣಕಾಸು ಬಿಕ್ಕಟ್ಟಿನಲ್ಲಿರುವ ಪಾಕಿಸ್ತಾನಕ್ಕೆ ಅಂತರರಾಷ್ಟ್ರೀಯ ಹಣಕಾಸು ನಿಧಿಯು 700 ದಶಲಕ್ಷ ಡಾಲರ್‌ಗಳ ಎರಡನೇ ಕಂತಿನ ಸಾಲ ನೀಡಿದೆ. ಪಾಕಿಸ್ತಾನ ಚುನಾವಣೆ ಎದುರಿಸಲಿರುವ ನಡುವೆಯೇ ಈ ಹಣ ಬಿಡುಗಡೆ ಮಾಡಲಾಗಿದೆ.

## ಅದಾನಿ ಸಮೂಹದ ತೆಕ್ಕೆಗೆ ಐ.ಎ.ಎನ್.ಎಸ್.

ನವದೆಹಲಿ, ಜ. 17 – ಉದ್ಯಮಿ ಗೌತಮ್ ಅದಾನಿ ಅವರ ಸಮೂಹ ಐ.ಎ.ಎನ್.ಎಸ್. ಇಂಡಿಯಾ ಪ್ರೈವೇಟ್ ಸುದ್ದಿ ಸಂಸ್ಥೆಯ ಸಂಪೂರ್ಣ ನಿಯಂತ್ರಣ ಪಡೆದುಕೊಂಡಿದೆ. ಕಳೆದ ತಿಂಗಳು ಅದಾನಿ ಸಮೂಹ ಐ.ಎ.ಎನ್.ಎಸ್.ನ ಶೇ.50.50ರ ಪಾಲುಗಾರಿಕೆ ಪಡೆದಿತ್ತು. ಈಗ ಶೇ.76ರಷ್ಟಕ್ಕೆ ಹೆಚ್ಚಿಸಿಕೊಂಡಿದೆ. ಜನವರಿ 16, 2024ರಂದು ಸಭೆ ನಡೆಸಿದ ಐ.ಎ.ಎನ್.ಎಸ್. ಮಂಡಳಿಯು, ಅದಾನಿ ಸಮೂಹಕ್ಕೆ ಷೇರುಗಳನ್ನು ಮಾರಲು ಸಮ್ಮತಿಸಿದೆ.

# ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಾರಥಿಗೆ 75 ರ ಸಂಭ್ರಮ...



ಯಾವುದೇ ಒಬ್ಬ ವ್ಯಕ್ತಿಯು ತನ್ನ ಜೀವಿತಾವಧಿಯಲ್ಲಿ 75ರ ಹರೆಯವನ್ನು ತಲುಪುವುದು ಯಾರಿಗಾದರೂ ಅತ್ಯಂತ ಸಂಭ್ರಮದ ಸಂಗತಿ. ಅದರಲ್ಲೂ ಹಲವಾರು ವಿಧದಲ್ಲಿ ಸಮಾಜಮುಖಿ ಚಟುವಟಿಕೆಗಳ ಮೂಲಕ ಜೀವನದಲ್ಲಿ ತುಂಬು ಸಾರ್ಥಕ್ಯವನ್ನು ಹೊಂದಿದ ವ್ಯಕ್ತಿಗೆ 75 ರ ಮೈಲಿಗಲ್ಲನ್ನು ತಲುಪುವುದು ವಿಶೇಷವೇ ಸರಿ. ಓರ್ವ ಮಾದರಿ ಶಿಕ್ಷಕನಾಗಿ, ಅತ್ಯುತ್ತಮ ಮುಖ್ಯ ಶಿಕ್ಷಕನಾಗಿ, ಎರಡು ದಶಕಗಳಿಗೂ ಹೆಚ್ಚಿನ ಅವಧಿಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಒಂದಿಲ್ಲೊಂದು ಹುದ್ದೆಯನ್ನು ಯಶಸ್ವಿಯಾಗಿ ನಿಭಾಯಿಸುತ್ತಾ, ಪ್ರಸ್ತುತ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕನ್ನಡದ ತೇರನ್ನು ಜಿಲ್ಲೆಯಾದ್ಯಂತ ಅರ್ಥಪೂರ್ಣವಾಗಿ ಎಳೆಯಲು ತಮ್ಮ ಜೀವನವನ್ನೇ ಸಮರ್ಪಿಸಿಕೊಂಡಿರುವ ಬಿ.ವಾಮದೇವಪ್ಪ ಅವರು, 18 ಜನವರಿ 2024 ರಂದು ತಮ್ಮ ಬದುಕಿನ 75 ನೇ ವಯಸ್ಸಿಗೆ ಕಾಲಿಡುತ್ತಿದ್ದಾರೆ.

ವಾಮದೇವಪ್ಪ ಅವರು ದಿನಾಂಕ 18.01.1950 ರಂದು ದಾವಣಗೆರೆ ತಾಲ್ಲೂಕು ಹಿರೇತೊಗಲೇರಿ ಗ್ರಾಮದ ಶ್ರೀಮತಿ ಗಂಗಮ್ಮ ಮತ್ತು ಬಿ. ಬಸಪ್ಪ ದಂಪತಿಗಳ ಸುಪುತ್ರನಾಗಿ ಜನಿಸಿದರು. ಎಂ.ಎ., ಬಿ.ಇಡಿ., ಪದವೀಧರರಾಗಿ, ಮೈಸೂರಿನಲ್ಲಿ ಇ.ಎಲ್.ಟಿ.ಸಿ. ಹಾಗೂ ನವದೆಹಲಿಯಲ್ಲಿ ಸಿ.ಸಿ.ಆರ್.ಟಿ. ವಿಶೇಷ ತರಬೇತಿಯನ್ನು ಪಡೆದು, ಶ್ರೀ ತರಳಬಾಳು ವಿದ್ಯಾ ಸಂಸ್ಥೆಯಲ್ಲಿ 35 ವರ್ಷಗಳ ಕಾಲ ಶಿಕ್ಷಕರಾಗಿ, ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ.

2001-2004ರ ಅವಧಿಯಲ್ಲಿ ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ, 2008-2012 ರವರೆಗೆ ಹಾಗೂ 2016-21 ರವರೆಗೆ ಎರಡು ಅವಧಿಗೆ ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸಿದ್ದಾರೆ. ಈ ಅವಧಿಯಲ್ಲಿ ಮಾಯಕೊಂಡದಲ್ಲಿ 2 ದಿನ, ಬಾಡದಲ್ಲಿ 2 ದಿನ, ಹದಡಿಯಲ್ಲಿ 1 ದಿನ, ಆನಗೋಡಿನಲ್ಲಿ 1 ದಿನ ಹೀಗೆ 4 ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಗ್ರಾಮೀಣ ಪ್ರದೇಶದಲ್ಲಿಯೇ ಅರ್ಥಪೂರ್ಣವಾಗಿ, ಸಂಘಟಿಸಿದ ಹೆಗ್ಗಳಿಕೆ ವಾಮದೇವಪ್ಪ ಅವರದ್ದಾಗಿದೆ.

ದಾವಣಗೆರೆಯಲ್ಲಿ ಕುವೆಂಪು ಕನ್ನಡ ಭವನ ನಿರ್ಮಾಣಕ್ಕೆ ನಿವೇಶನ ದೊರಕಿಸುವಲ್ಲಿ ಮತ್ತು ಭವನ ನಿರ್ಮಾಣದಲ್ಲೂ ಅವರ ಪಾತ್ರ ಗಮನಾರ್ಹವಾಗಿದೆ. ದಾವಣಗೆರೆ ತರಳಬಾಳು ಬಡಾವಣೆಯಲ್ಲಿ ಕಳೆದ 30 ವರ್ಷಗಳಿಂದಲೂ ನಿರಂತರವಾಗಿ ಶಿವಗೋಷ್ಠಿ ಕಾರ್ಯಕ್ರಮ ನಡೆಸುತ್ತಾ ಬರುವಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವುದು ಸಾಹಿತ್ಯಾಸಕ್ತರ ಮೆಚ್ಚುಗೆಗೆ ಪಾತ್ರವಾಗಿದೆ. ಶಾಲಾ ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವ, ದಾವಣಗೆರೆ ತಾಲ್ಲೂಕು ಕಸಾಪದ 85 ದತ್ತಿ ಕಾರ್ಯಕ್ರಮಗಳನ್ನು ದಾವಣಗೆರೆ ನಗರ ಹಾಗೂ ಗ್ರಾಮೀಣ ಭಾಗಗಳಲ್ಲಿ ಅರ್ಥಪೂರ್ಣವಾಗಿ ಆಯೋಜನೆ ಹಾಗೂ ಅನೇಕ ದತ್ತಿ ನಿಧಿಗಳ ಸ್ಥಾಪನೆಯಾಗುವಲ್ಲಿ, ಮಹಲಿಂಗರಂಗ ಪ್ರಶಸ್ತಿ ಸ್ಥಾಪಿಸುವಲ್ಲಿ, ಕಸಾಪಕ್ಕೆ 6 ಸಾವಿರಕ್ಕೂ ಹೆಚ್ಚು ಆಜೀವ ಸದಸ್ಯರನ್ನು ಮಾಡುವಲ್ಲಿ ಅವರ ಕನ್ನಡದ ಸೇವೆ ಅನುಪಮ.

ವಾಮದೇವಪ್ಪ ಅವರು ಕೇವಲ ಕನ್ನಡಪರ ಸಂಘಟನೆ ಮಾತ್ರವಲ್ಲದೇ, ಸಾಹಿತ್ಯ ಕೃಷಿಯಲ್ಲಿಯೂ ತಮ್ಮ ಕಿಂಚಿತ್ ಸೇವೆಯನ್ನು ಸಲ್ಲಿಸಿದ್ದಾರೆ. 15ಕ್ಕೂ ಹೆಚ್ಚು ವ್ಯಕ್ತಿ ಪರಿಚಯಗಳು, 10 ಸಂಪಾದಿತ ಕೃತಿಗಳು, 'ಸ್ಮೃತಿ ಶಂಕರ' ಕೃತಿ, ನಾಲ್ಕು ಸಮ್ಮೇಳನಗಳ ಸವಿನೆನಪಿಗಾಗಿ ಸ್ಮರಣ ಸಂಚಿಕೆಗಳನ್ನು ಹೊರತಂದು, ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಪಿಸಿದ್ದಾರೆ. ಸಿರಿಗೆರೆ ಜಗದ್ಗುರುಗಳವರ ನೇತೃತ್ವದಲ್ಲಿ ನಡೆದ ಮದ್ಯಪಾನ ನಿಷೇಧ ಆಂದೋಲನದಲ್ಲಿ 15000 ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಒಗ್ಗೂಡಿಸಿಕೊಂಡು ಜನ ಜಾಗೃತಿ ಮೂಡಿಸುವಂತಹ ಕೆಲಸದಲ್ಲಿಯೂ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಪೂರಕವಾಗಿ ಅನೇಕ ಪ್ರಶ್ನೆ ಪತ್ರಿಕೆ ಕೋಷ್ಠಕಗಳನ್ನು ರಚಿಸಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಪ್ರೋತ್ಸಾಹ ನೀಡುವ ಕೆಲಸ ಮಾಡಿದ್ದಾರೆ. ಸಂಪನ್ಮೂಲ ವ್ಯಕ್ತಿಯಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯೊಂದಿಗೆ ಸಹಕರಿಸಿದ್ದಾರೆ.

ವಾಮದೇವಪ್ಪ ಅವರು ಸಲ್ಲಿಸುತ್ತಿರುವ ಸಾಮಾಜಿಕ ಸೇವೆಯನ್ನು ಪರಿಗಣಿಸಿ ತರಳಬಾಳು ಬೃಹನ್ಮಠ, ರಂಭಾಪುರಿ ಪೀಠ ಸೇರಿದಂತೆ, ಅನೇಕ ಮಠ-ಮಾನ್ಯಗಳು, ಸಂಘ-ಸಂಸ್ಥೆಗಳು ಪ್ರಶಸ್ತಿ - ಸನ್ಮಾನ ನೀಡಿ ಗೌರವಿಸಿವೆ.

ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ 2021ರ ನವೆಂಬರ್‌ನಲ್ಲಿ ಪ್ರಚಂಡ ಬಹುಮತದಿಂದ ಚುನಾಯಿತರಾದ ಬಳಿಕ ಕಳೆದ ಎರಡು ವರ್ಷಗಳಲ್ಲಿ ಅನೇಕ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಆಯೋಜಿಸಿದ ಕೀರ್ತಿ ವಾಮದೇವಪ್ಪ ಅವರಿಗೆ ಸಲ್ಲುತ್ತದೆ.

ಜಿಲ್ಲಾ ಕಸಾಪ ಸಂಯುಕ್ತಾಶ್ರಯದಲ್ಲಿ ಇತ್ತೀಚಿಗೆ ಲೋಕಾರ್ಪಣೆಗೊಂಡ ವಿಶ್ರಾಂತ ಶಿಕ್ಷಕ ಬಿ.ಎಸ್. ಸಿದ್ದೇಶ್ ವಿರಚಿತ 'ಅವಾಂತರ' ಕೃತಿ ಸೇರಿದಂತೆ ಈವರೆಗೆ 73 ಪುಸ್ತಕಗಳು ಲೋಕಾರ್ಪಣೆಗೊಂಡಿವೆ. ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ನೀಡಿರುವ ಐದು ಲಕ್ಷ ರೂಪಾಯಿಗಳ ಅನುದಾನದಲ್ಲಿ ಡಿಜಿಟಲ್ ಗ್ರಂಥಾಲಯ ಸ್ಥಾಪನೆ, ಶಾಸಕ ಎಸ್.ಎ. ರವೀಂದ್ರನಾಥ್ ಹಾಗೂ ವಿಧಾನ ಪರಿಷತ್ ಸದಸ್ಯ ಮೋಹನ್ ಕೊಂಡಜ್ಜಿಯವರು ನೀಡಿರುವ ತಲಾ ಐದು ಲಕ್ಷ ರೂ.ಗಳ ಅನುದಾನದಲ್ಲಿ ಕುವೆಂಪು ಕನ್ನಡ ಭವನದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಭವನಕ್ಕೆ ಅತೀ ಸುಂದರವಾದ ಧ್ವಾರ ಬಾಗಿಲು ನಿರ್ಮಾಣವಾಗಿದೆ. ಭವನದ ಹೊರಭಾಗದಲ್ಲಿ ಬಯಲು ರಂಗಮಂದಿರದ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಪ್ರಸ್ತುತ ನೆನೆಗುದಿಗೆ ಬಿದ್ದಿರುವ ವಿಶ್ವಕನ್ನಡ ಸಮ್ಮೇಳನ ಹಾಗೂ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ತಮ್ಮ ಅವಧಿಯಲ್ಲಿ ದಾವಣಗೆರೆಯಲ್ಲಿ ನಡೆಸಬೇಕೆಂದು ಅಚಲ ವಿಶ್ವಾಸದಲ್ಲಿದ್ದಾರೆ.

ಪ್ರಸ್ತುತ ಸಾದು ಸದ್ಧರ್ಮ ಸಮಾಜದ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸುತ್ತಿರುವ ವಾಮದೇವಪ್ಪ ಅವರ ಸಾಮಾಜಿಕ ಚಟುವಟಿಕೆಗಳಿಗೆ ಸದಾ ಜೊತೆಗಿದ್ದು ಹೆಜ್ಜೆ ಹಾಕುತ್ತಿದ್ದಾರೆ ಅವರ ಧರ್ಮಪತ್ನಿ ಕಮಲಮ್ಮ ಮತ್ತು ಅವರ ಕುಟುಂಬ ಸದಸ್ಯರು.

75ರ ವಯಸ್ಸು ನನ್ನ ದೇಹಕ್ಕಾಗಿದೆಯೇ ಹೊರತು ಕನ್ನಡದ ಕೆಲಸ ಮಾಡಬೇಕೆಂಬ ನನ್ನ ಮನಸ್ಸಿಗಲ್ಲ. ತನ್ನ ದೇಹದಲ್ಲಿ ಕೊನೆ ಉಸಿರಿರುವವರೆಗೂ ಕನ್ನಡ ನಾಡು, ನುಡಿಗಾಗಿ ದುಡಿಯುತ್ತೇನೆ ಎನ್ನುತ್ತಾರೆ ಬಿ. ವಾಮದೇವಪ್ಪ.



**- ಕೆ.ರಾಘವೇಂದ್ರ ನಾಯರಿ,**
ಗೌರವ ಕೋಶಾಧ್ಯಕ್ಷ, ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು.

# 'ಭಾರತ ಜೋಡೋ ನ್ಯಾಯ ಯಾತ್ರೆ' ಕಾಂಗ್ರೆಸ್ ಗೆಲುವಿಗೆ ಸಹಕಾರಿ

## ನಗರದಲ್ಲಿನ ಕಾಂಗ್ರೆಸ್ ಸಭೆಯಲ್ಲಿ ಎಐಸಿಸಿ ಕಾರ್ಯದರ್ಶಿ ಜಯಕುಮಾರ್ ಮಯೂರ್

ದಾವಣಗೆರೆ, ಜ. 17- ಅಖಿಲ ಭಾರತ ಕಾಂಗ್ರೆಸ್ ಸಮಿತಿ ವರಿಷ್ಠ ರಾಹುಲ್ ಗಾಂಧಿ ಮುಂದಾಳತ್ವದಲ್ಲಿ ಪ್ರಾರಂಭವಾದ 'ಭಾರತ್ ಜೋಡೋ ನ್ಯಾಯ ಯಾತ್ರೆ' ಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಗೆಲುವಿಗೆ ಸಹಕಾರಿಯಾಗಲಿದೆ ಎಂದು ಎಐಸಿಸಿ ಕಾರ್ಯದರ್ಶಿ ಜಯಕುಮಾರ್ ಮಯೂರ್ ಹೇಳಿದರು.

ನಗರದಲ್ಲಿರುವ ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಇಂದು ನಡೆದ ಪಕ್ಷದ ಮುಖಂಡರ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಈ ಹಿಂದೆ ರಾಹುಲ್ ಗಾಂಧಿ ನಡೆಸಿದ 'ಭಾರತ್ ಜೋಡೋ ಯಾತ್ರೆ' ಯಿಂದಾಗಿ ಕರ್ನಾಟಕ, ತೆಲಂಗಾಣ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಭರ್ಜರಿ ಗೆಲುವು ಸಾಧಿಸಲು ಮತ್ತು ಅಧಿಕಾರದ ಗದ್ದುಗೆ ಏರಲು ಸಹಕಾರಿಯಾಗಿದ್ದನ್ನು ಸ್ಮರಿಸಿದರು. ಇದೀಗ ಮಣಿಪುರದಿಂದ ಆರಂಭವಾದ 'ಭಾರತ್ ಜೋಡೋ ನ್ಯಾಯ ಯಾತ್ರೆ' ಕೂಡ ಲೋಕಸಭಾ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸುವ ಮೂಲಕ ಕೇಂದ್ರದಲ್ಲಿ ಅಧಿಕಾರದ ಗದ್ದುಗೆ ಏರಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.



ಕರ್ನಾಟಕದಲ್ಲಿ ಶೇ. 40 ಕಮೀಷನ್ ಬಿಜೆಪಿ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸಿದಂತೆ, ದೇಶದಲ್ಲಿ ಮತದಾರರು ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವನ್ನು ಕೆಳಗಿಳಿಸಬೇಕೆಂದು ಮನವಿ ಮಾಡಿದರು. ತಳಮಟ್ಟದ ಕಾರ್ಯಕರ್ತರಿಗೂ ಅಧಿಕಾರ ವಿಕೇಂದ್ರೀಕರಣದಡಿ ಸ್ಥಾನಮಾನ ನೀಡಲು ಎಐಸಿಸಿ ತೀರ್ಮಾನಿಸಿದ್ದು, ಆಶ್ರಯ ಸಮಿತಿ, ಆರೋಗ್ಯ ಸುರಕ್ಷಾ ಸಮಿತಿ, ಕಾಡಾ, ಕೆಡಿಪಿ, ಭೂ ಹಿಡುವಳಿ, ದಿಶಾ ಸೇರಿದಂತೆ ವಿವಿಧ ಸಮಿತಿಗಳಿಗೆ ತಳಮಟ್ಟದ ಕಾರ್ಯಕರ್ತರಿಗೆ ನೇಮಕ ಮಾಡಿಕೊಳ್ಳುವ ಕಾರ್ಯ ಶೀಘ್ರದಲ್ಲೇ ಪ್ರಾರಂಭವಾಗಲಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಿಸುವ ಮೂಲಕ ಸೋನಿಯಾಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ್ ಖರ್ಗೆ ಅವರುಗಳ ಕೈ ಬಲಪಡಿಸಬೇಕೆಂದು ಮನವಿ ಮಾಡಿದರು.

ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪ ಮಾತನಾಡಿ, ಕಾಂಗ್ರೆಸ್ ಸಂಸ್ಥಾಪನಾ ದಿನಾಚರಣೆ ಪ್ರಯುಕ್ತ 'ದೇಶಕ್ಕಾಗಿ ದೇಣಿಗೆ' ಕಾರ್ಯಕ್ರಮ ಹಮ್ಮಿಕೊಂಡಿದ್ದು, ಪಕ್ಷದ ಹಿತೈಷಿಗಳು, ಅಭಿಮಾನಿಗಳು, ಮತದಾರರು ಆನ್‌ಲೈನ್ ಮೂಲಕ ದೇಣಿಗೆ ನೀಡಲು ಅವಕಾಶವಿದೆ ಎಂದರು. ಕಾರ್ಯಕರ್ತರು ಮನೆ ಮನೆಗೆ ತೆರಳಿ ಸಾರ್ವಜನಿಕರಿಂದ ದೇಣಿಗೆ ಸಂಗ್ರಹಿಸಬೇಕಾಗಿದೆ. ಪ್ರತಿ ತಾಲ್ಲೂಕಿನಿಂದ 1.38 ಲಕ್ಷ ರೂ. ದೇಣಿಗೆ ಸಂಗ್ರಹಿಸುವ ಗುರಿ ಹೊಂದಲಾಗಿದೆ ಎಂದು ಹೇಳಿದರು.

ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಅನಿತಾಬಾಯಿ ಮಾಲತೇಶರಾವ್ ಜಾಧವ್, ಮುಖಂಡರಾದ ನಂದಿಗಾವಿ ಶ್ರೀನಿವಾಸ್, ಜಗಳೂರಿನ ಕೆ.ಪಿ. ಪಾಲಯ್ಯ, ಎಸ್. ಮಲ್ಲಿಕಾರ್ಜುನ್ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು.

# ಕಳ್ಳತನದ ಸುಳಿಯಲ್ಲಿ ನ್ಯೂಜಿಲ್ಯಾಂಡ್‌ನ ಮೊದಲ ವಲಸೆ ಶಾಸಕಿ

## ದುಬಾರಿ ಬಟ್ಟೆ ಕದ್ದ ಆರೋಪದ ನಂತರ ರಾಜೀನಾಮೆ

ವೆಲ್ಲಿಂಗ್ಟನ್, ಜ. 17 – ನ್ಯೂಜಿಲ್ಯಾಂಡ್‌ನ ಮೊದಲ ವಲಸೆ ಶಾಸಕಿ ಗೊಲ್ರಿಜ್ ಗಹ್ರಮಾನ್ ಅವರು ಬೂಟಿಕ್‌ನಲ್ಲಿ ದುಬಾರಿ ಬಟ್ಟೆಗಳನ್ನು ಕಳ್ಳತನ ಮಾಡಿದ ಆರೋಪದ ನಂತರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಗಹ್ರಮಾನ್ ಅವರು ನ್ಯೂಜಿಲ್ಯಾಂಡ್‌ನ ಗ್ರೀನ್ ಪಾರ್ಟಿಯ ಸದಸ್ಯೆ. ಬುಧವಾರ ಅವರ ವಿರುದ್ಧ ಎರಡು ಬಾರಿ ಕಳ್ಳತನ ಮಾಡಿದ ಆರೋಪ ದಾಖಲಿಸಲಾಗಿತ್ತು. 2023ರ ಡಿಸೆಂಬರ್ 21 ಹಾಗೂ 23ರಂದು ನಡೆದ ಎರಡು ಕಳ್ಳತನಗಳ ಘಟನೆಗಳಲ್ಲಿ ಭಾಗಿಯಾಗಿದ್ದರು ಎಂದು ಆರೋಪಿಸಲಾಗಿದೆ. ಅವರಿಗೆ ಆಕ್‌ಲ್ಯಾಂಡ್ ಜಿಲ್ಲಾ ನ್ಯಾಯಾಲಯ ಸಮನ್ಸ್ ಕಳಿಸಿದೆ.

ಗಹ್ರಮಾನ್ ಅವರು ಮಂಗಳವಾರ ರಾಜೀನಾಮೆ ನೀಡಿದ್ದು, ಕೆಲಸದ ಒತ್ತಡದಿಂದಾಗಿ ನನ್ನ ಸ್ವಭಾವಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡಿರುವುದಾಗಿ ಹೇಳಿದ್ದಾರೆ. ನನ್ನ ವರ್ತನೆಯ ಬಗ್ಗೆ ಯಾವುದೇ ತಾರ್ಕಿಕ ವಿವರಣೆ ನೀಡಲು ಸಾಧ್ಯವಾಗುತ್ತಿಲ್ಲ. ವೈದ್ಯಕೀಯ ಪರಿಶೀಲನೆಯ ನಂತರ, ನಾನು ಸ್ವಸ್ಥವಾಗಿಲ್ಲ ಎಂಬುದು ಅರ್ಥವಾಗಿದೆ ಎಂದೂ ಅವರು ತಿಳಿಸಿದ್ದಾರೆ.

ಆಕ್‌ಲ್ಯಾಂಡ್‌ನ ಸ್ಕಾಟೀಸ್ ಬೂಟಿಕ್‌ನಲ್ಲಿ ಗಹ್ರಮಾನ್ ಅವರು ಅವರು ಎರಡು ಬಾರಿ ಕಳ್ಳತನ ಮಾಡಿದ್ದರು ಎಂದು ಆರೋಪಿಸಲಾಗಿದೆ. ಅಕ್ಟೋಬರ್ ತಿಂಗಳಲ್ಲಿ ಇನ್ನೊಂದು ಕಳ್ಳತನದಲ್ಲಿ ಭಾಗಿಯಾಗಿದ್ದರು ಎಂಬ ಆರೋಪವೂ ಕೇಳಿ ಬಂದಿದೆ. ಗಹ್ರಮಾನ್ ಅವರು ಇರಾನ್ ಸಂಜಾತೆಯಾಗಿದ್ದಾರೆ. ಮಾನವ ಹಕ್ಕುಗಳ ವಕೀಲೆಯಾಗಿದ್ದ ಅವರು, ಇರಾನ್ - ಇರಾಕ್ ಸಮರದ ನಂತರ ನ್ಯೂಜಿಲ್ಯಾಂಡ್‌ನಲ್ಲಿ ಆಶ್ರಯ ಕೇಳಿದ್ದರು. 2017ರಲ್ಲಿ ನ್ಯೂಜಿಲ್ಯಾಂಡ್ ಸಂಸತ್ತಿಗೆ ಆಯ್ಕೆಯಾದ ಮೊದಲ ಆಶ್ರಿತೆಯಾಗಿದ್ದರು.

ಇಸ್ರೇಲ್ - ಹಮಾಸ್ ನಡುವಿನ ಸಂಘರ್ಷ ನಿಲ್ಲಿಸುವಂತೆ ಪ್ರಬಲವಾಗಿ ಪ್ರತಿಪಾದಿಸುವ ನ್ಯೂಜಿಲ್ಯಾಂಡಿಗರ ಪೈಕಿ ಅವರು ಮುಂಚೂಣಿಯಲ್ಲಿದ್ದರು.

ಈ ಬಗ್ಗೆ ಹೇಳಿಕೆ ನೀಡಿರುವ ಗ್ರೀನ್ಸ್ ಪಕ್ಷದ ಸಹ ಸ್ಥಾಪಕ ಜೇಮ್ಸ್ ಷಾ, ಗಹ್ರಮಾನ್ ಅವರು ಆಯ್ಕೆಯಾದ ನಂತರದಿಂದ ಬೆದರಿಕೆಗಳನ್ನು ಎದುರಿಸಿದ್ದರು. ನಿರಂತರವಾಗಿ ಲೈಂಗಿಕ ಹಿಂಸಾಚಾರ, ದೈಹಿಕ ಹಿಂಸಾಚಾರ, ಹತ್ಯೆ ಬೆದರಿಕೆಗಳನ್ನು ಎದುರಿಸಿದ್ದರು. ಈ ಬಗ್ಗೆ ಪೊಲೀಸರ ತನಿಖೆ ನಡೆಯುತ್ತಿದೆ. ಇಂತಹ ಬೆದರಿಕೆಯ ಒತ್ತಡಗಳ ನಡುವೆ ಇರುವಾಗ ಪರಿಣಾಮಗಳಾಗುತ್ತವೆ ಎಂದು ಹೇಳಿದ್ದಾರೆ.

# ರಾಜ್ಯದಲ್ಲಿ 22 ಸಾವಿರ ಕೋಟಿ ಹೂಡಿಕೆಗೆ ಒಡಂಬಡಿಕೆ

ಬೆಂಗಳೂರು, ಜ. 17 – ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ಸಮಾವೇಶದಲ್ಲಿ ಪಾಲ್ಗೊಂಡಿರುವ ಕರ್ನಾಟಕ ಸರ್ಕಾರ ವಿವಿಧ ಕಂಪನಿಗಳೊಂದಿಗೆ 22 ಸಾವಿರ ಕೋಟಿ ರೂ. ಹೂಡಿಕೆ ಪ್ರಸ್ತಾವನೆಗಳ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಿದೆ ಎಂದು ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಸಚಿವರು, ವೆಬ್‌ವರ್ಕ್ಸ್ ಕಂಪನಿ ಬೆಂಗಳೂರಿನಲ್ಲಿ ಸ್ಥಾಪಿಸಲಿರುವ 100 ಮೆಗಾವ್ಯಾಟ್ ಸಾಮರ್ಥ್ಯದ 20 ಸಾವಿರ ಕೋಟಿ ರೂ. ಬಂಡವಾಳ ಹೂಡಿಕೆಯ ಡೇಟಾ ಸೆಂಟರ್ ಪಾರ್ಕ್ ಯೋಜನೆ ಇದರಲ್ಲಿ ಸೇರಿದೆ ಎಂದಿದ್ದಾರೆ.

ಇದಲ್ಲದೆ ಮೈಕ್ರೋಸಾಫ್ಟ್, ಹಿಟಾಚಿ, ಲುಲು ಗ್ರೂಪ್, ಹ್ಯೂಲೆಟ್ ಪೆಕಾರ್ಡ್ (ಎಚ್.ಪಿ), ಹನಿವೆಲ್, ಐನಾಕ್ಸ್, ವೋಲ್ವೋ, ನೆಸ್ಲೆ, ಕಾಯಿನ್ ಬೇಸ್, ಟಕೇಡಾ ಫಾರ್ಮಾ, ಬಿಎಲ್ ಆಗ್ರೋ ಸೇರಿದಂತೆ ವಿವಿಧ ಕಂಪನಿಗಳೊಂದಿಗೆ 2,000 ಕೋಟಿ ರೂ. ಮೌಲ್ಯದ ಹೂಡಿಕೆಯ ತಿಳಿವಳಿಕೆ ಪತ್ರಗಳಿಗೆ ಸಹಿ ಹಾಕಲಾಗಿದೆ.

ಮೈಕ್ರೋಸಾಫ್ಟ್ ಕಂಪನಿ ಕೌಶಲ್ಯಾಭಿವೃದ್ಧಿ ಮತ್ತು ಸುಗಮ ಆಡಳಿತ ಉಪಕ್ರಮಗಳ ತರಬೇತಿ ಕೊಡಲಿದೆ, ಹಿಟಾಚಿ ಕಂಪನಿ ಕರ್ನಾಟಕದ ಗ್ರಾಮೀಣ ಭಾಗಗಳಲ್ಲಿ ಆರೋಗ್ಯ ಸೇವೆ, ಶಿಕ್ಷಣ ಮತ್ತು ಇ-ಗವರ್ನೆನ್ಸ್ ಕ್ಷೇತ್ರಗಳಲ್ಲಿ ಬಂಡವಾಳ ತೊಡಗಿಸಲಿದ್ದು, ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ, ಲುಲು ಸಮೂಹ ಸಂಸ್ಥೆ ಹಣ್ಣು ಮತ್ತು ತರಕಾರಿ ಸಂಸ್ಕರಣೆ ಕ್ಷೇತ್ರದಲ್ಲಿ ಹೂಡಿಕೆಗೆ ಉತ್ಸುಕವಾಗಿದೆ.

ಈ ಹೂಡಿಕೆಗಳಿಂದ ಉತ್ತರ ಕರ್ನಾಟಕದ ವಿಜಯಪುರ, ಕಲಬುರಗಿ ಸೇರಿದಂತೆ ಹಲವು ಭಾಗಗಳು ಮುಂಚೂಣಿಗೆ ಬರಲಿದ್ದು, ಯೋಜನೆಗಳಿಗೆ ಸರ್ಕಾರ ಸಂಪೂರ್ಣ ಸಹಕಾರ ನೀಡಲಿದೆ ಎಂದಿದ್ದಾರೆ.

ಮೈಕ್ರೋಸಾಫ್ಟ್ ಕಂಪನಿಯು ಡಿಜಿಟಲ್ ಉತ್ಪಾದಕತೆ, ಉದ್ಯಮಶೀಲತೆ ಮತ್ತು ಸಂವಹನಕ್ಕೆ ಸಂಬಂಧಿಸಿದಂತೆ 'ಮೈಕ್ರೋಸಾಫ್ಟ್ ರೈಸ್' ಡಿಜಿಟಲ್ ಸ್ಕಿಲ್ಲಿಂಗ್ ಸೌಲಭ್ಯ ಮೂಲಕ 70 ಗಂಟೆಗಳ ವರ್ಚ್ಯುಯಲ್ ತರಬೇತಿ ನೀಡಲಿದೆ. ಅಲ್ಲದೆ, ಅಭ್ಯರ್ಥಿಗಳಿಗೆ ಮೈಕ್ರೋಸಾಫ್ಟ್ ಟ್ರೈನಿಂಗ್ ಪ್ಲಾಟ್ ಫಾರಂ ಮೂಲಕ 150 ಗಂಟೆಗಳ ಹೆಚ್ಚುವರಿ ಕೌಶಲ್ಯಾಭಿವೃದ್ಧಿ ಪಠ್ಯ ಸಾಮಗ್ರಿ ಲಭಿಸಲಿದ್ದು, ರಾಜ್ಯದ ಯುವಜನರಿಗೆ ಕ್ಲೌಡ್, ಎಐ, ಸೈಬರ್ ಸೆಕ್ಯುರಿಟಿ ಕ್ಷೇತ್ರಗಳಲ್ಲಿ ಅವಕಾಶಗಳು ಸಿಗಲಿವೆ.

ಹನಿವೆಲ್ ಕಂಪನಿಯು ಐಒಟಿ (ಇಂಟರ್ನೆಟ್ ಆಫ್ ಥಿಂಗ್ಸ್) ಮೂಲಕ ಸಂಚಾರ ನಿರ್ವಹಣೆ, ತ್ಯಾಜ್ಯ ನಿರ್ವಹಣೆ ಮುಂತಾದವುಗಳನ್ನು ನಿಭಾಯಿಸಲಿದೆ. ಲುಲು ಸಮೂಹ 300 ಕೋಟಿ ರೂ. ಹೂಡಿಕೆಯೊಂದಿಗೆ ವಿಜಯಪುರ ಜಿಲ್ಲೆಯಲ್ಲಿ ಆಹಾರ ಸಂಸ್ಕರಣೆ, ಟಕೇಡಾ ಫಾರ್ಮಾ ಬೆಂಗಳೂರಿನಲ್ಲಿ ಗ್ಲೋಬಲ್ ಕೆಪಾಸಿಟಿ ಸೆಂಟರ್ ತೆರೆಯಲು ಮುಂದೆ ಬಂದಿದೆ ಎಂದು ಪಾಟೀಲ್ ತಿಳಿಸಿದ್ದಾರೆ.

# ಜೋಡೋ ಯಾತ್ರೆಯಲ್ಲಿ ಅಖಿಲೇಶ್ ಯಾದವ್ ಭಾಗಿ ಇಲ್ಲ

ಲಖ್ನೌ, ಜ. 17 – ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಸಲಾಗುತ್ತಿರುವ ಭಾರತ್ ಜೋಡೋ ನ್ಯಾಯ ಯಾತ್ರೆಯಲ್ಲಿ ತಾವು ಭಾಗವಹಿಸುವ ಸಾಧ್ಯತೆ ಇಲ್ಲ ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಹೇಳಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರಿಗೆ ಯಾತ್ರೆ ಕುರಿತು ಪ್ರಶ್ನಿಸಿದಾಗ, ಕಾಂಗ್ರೆಸ್ ಪಕ್ಷವೇ ಆಗಲೀ - ಬಿಜೆಪಿಯೇ ಆಗಲೀ ಅವರ ಕಾರ್ಯಕ್ರಮಗಳಿಗೆ ತಮ್ಮನ್ನು ಕರೆಯುವುದಿಲ್ಲ ಎಂದರು. ರಾಹುಲ್ ಗಾಂಧಿ ಅವರ ಯಾತ್ರೆಯು ಫೆಬ್ರವರಿ 14ರಂದು ಉತ್ತರ ಪ್ರದೇಶಕ್ಕೆ ಬರಲಿದೆ. ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಹಾಗೂ ಸಮಾಜವಾದಿ ಪಕ್ಷಗಳ ನಡುವಿನ ಮೈತ್ರಿಯ ಬಗ್ಗೆ ಇನ್ನೂ ಸ್ಪಷ್ಟತೆ ದೊರೆತಿಲ್ಲ.

## ಕಾಣೆಯಾಗಿದ್ದಾರೆ



ಚಿದಂಬರ ದೇವಸ್ಥಾನದ ಹತ್ತಿರ, ಡಿ.ಸಿ.ಎಂ. ರಸ್ತೆ, ನಿಟುವಳ್ಳಿ, ದಾವಣಗೆರೆ ವಾಸಿಯಾದ ಜಗನ್ನಾಥ್‌ಶೆಟ್ಟಿ ತಂದೆ ಲೇಟ್ ಹನುಮಂತ ಶೆಟ್ಟಿ, 60 ವರ್ಷ, ವೈಶ್ಯ ಜನಾಂಗ, ಸಾಧಾರಣ ಮೈಕಟ್ಟು, ದುಂಡು ಮುಖ, ಗೋಧಿ ಮೈ ಬಣ್ಣ, 5.5 ಎತ್ತರ, ಬೆನ್ನಿನ ಮೇಲೆ ಹಳೇ ಗಾಯದ ಕಲೆ ಇರುತ್ತದೆ. ಕನ್ನಡ ಭಾಷೆ ಮಾತನಾಡುತ್ತಾರೆ. ಬಿಳಿ ಬಣ್ಣದ ತುಂಬು ತೋಳಿನ ಶರ್ಟ್, ಪಟಾಪಟಿ ನೀಲಿ ಮತ್ತು ಕಪ್ಪು ಬಣ್ಣ ಮಿಶ್ರಿತ ಪಂಚೆ ಧರಿಸಿರುತ್ತಾರೆ. ಇವರು ದಿನಾಂಕ 28.9.2023 ರಂದು ಬೆಳಿಗ್ಗೆ 11.00 ಗಂಟೆಗೆ ಮನೆಯಿಂದ ಹೊರಗೆ ಹೋದವರು ಇದೂವರೆಗೂ ಮನೆಗೆ ಬಂದಿರುವುದಿಲ್ಲ, ಈತನ ಸುಳಿವು ಯಾರಿಗಾದರು ಸಿಕ್ಕಲ್ಲಿ, ಈ ಕೆಳಗಿನ ಫೋನ್‌ಗೆ ಅಥವಾ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಲು ಕೋರಿದೆ.

**ಫೋ. : 97406 81258**


ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು



ಜಿಲ್ಲಾ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳ ಅಧ್ಯಕ್ಷರು,
ಎಸ್.ಆರ್.ಪಿ. ಸಮೂಹ ಸಂಸ್ಥೆಗಳ ಸಂಸ್ಥಾಪಕರೂ, ಶ್ರೀ ವೀರಮಾಹೇಶ್ವರ ಕೋ-ಆಪ್ ಸೊಸೈಟಿಯ ಅಧ್ಯಕ್ಷರು,
ವಿಚಾರಲೇಖ ವಾರ ಪತ್ರಿಕೆಯ ಸಂಪಾದಕರೂ, ವಿವಿಧ ಧಾರ್ಮಿಕ, ಸಾಮಾಜಿಕ ಸಂಘ - ಸಂಸ್ಥೆಗಳ ಸಕ್ರಿಯ ಪದಾಧಿಕಾರಿಗಳೂ ಆದ

**ಶ್ರೀಯುತ ತ್ಯಾವಣಗಿ ವೀರಭದ್ರಸ್ವಾಮಿ**

ಅವರಿಗೆ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು.

- ಎಸ್.ಆರ್.ಪಿ. ಕಾನ್ವೆಂಟ್ ಹಾಗೂ ಪ್ರೌಢಶಾಲೆಯ ಆಡಳಿತ ಮಂಡಳಿ, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ವೃಂದ
- ಮೌಂಟ್ ಎವರೆಸ್ಟ್ ವಿದ್ಯಾಲಯ, ಜಯನಗರ, ನಿಟ್ಟುವಳ್ಳಿ, ಆಡಳಿತ ಮಂಡಳಿ, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ವೃಂದ
- ಶಾರದ ವಿದ್ಯಾಲಯ, ಆಡಳಿತ ಮಂಡಳಿ, ಸಿಬ್ಬಂದಿ ವರ್ಗ, ಮಲೇಬೆನ್ನೂರು, ಹರಿಹರ ತಾಲ್ಲೂಕು.
- ಎ.ಸಿ.ಎಂ. ಸ್ಕೂಲ್, ದೇವರಾಜ ಅರಸು ಬಡಾವಣೆ, ಆಡಳಿತ ಮಂಡಳಿ, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ವೃಂದ
- ಮೌಂಟ್ ಎವರೆಸ್ಟ್ ವಿದ್ಯಾಲಯ, ಆವರಗೊಳ್ಳ, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ವೃಂದ
- ಶ್ರೀ ಶಿವಗಂಗೋತ್ರಿ ಪಬ್ಲಿಕ್ ಸ್ಕೂಲ್, ಶಾಮನೂರು, ಆಡಳಿತ ಮಂಡಳಿ, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ವೃಂದ
- ಅರ್ನವ್ ಕಿಡ್ಸ್, ಆಡಳಿತ ಮಂಡಳಿ, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ವೃಂದ
- ದಾವಣಗೆರೆ ಜಿಲ್ಲಾ ಶಾಶ್ವತ ಅನುದಾನ ರಹಿತ ಆಡಳಿತ ಮಂಡಳಿಗಳ ಸಂಘ.
- ಮಾನವ ಧರ್ಮ ಕಲ್ಯಾಣ ಟ್ರಸ್ಟ್‌ನ ಆಡಳಿತ ಮಂಡಳಿ.
- ವಿಚಾರ ಲೇಖ ಪತ್ರಿಕಾ ಬಳಗ.

# ರಾಮ ಮಂದಿರ ಸಮಾರಂಭದಲ್ಲಿ ಪ್ರಧಾನಿ ಮುಖ್ಯ ಯಜಮಾನ

ವಾರಣಾಸಿ, ಜ. 17 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಜ.22ರಂದು ನಡೆಯಲಿರುವ ಅಯೋಧ್ಯೆ ರಾಮ ದೇವಾಲಯದ ಪ್ರಾಣ ಪ್ರತಿಷ್ಠಾಪನೆ ಸಮಾರಂಭದಲ್ಲಿ ಮುಖ್ಯ ಯಜಮಾನರಾಗಲಿದ್ದಾರೆ. ಸಾಮಾನ್ಯವಾಗಿ ಯಜಮಾನ ಪೂಜೆಯ ಮುಖ್ಯ ಆತಿಥೇಯರಾಗಿರುತ್ತಾರೆ. ಅವರ ಪರವಾಗಿ ಪೂಜಾ ವಿಧಿಗಳನ್ನು ಕೈಗೊಳ್ಳಲಾಗುತ್ತದೆ. ಈ ಬಗ್ಗೆ ಪತ್ರಕರ್ತರೊಂದಿಗೆ ಮಾತನಾಡಿರುವ ಅಯೋಧ್ಯೆ ದೇವಾಲಯದ ಪೂಜಾ ವಿಧಿಗಳ ಮುಖ್ಯ ಅರ್ಚಕ ಲಕ್ಷ್ಮಿಕಾಂತ್ ದೀಕ್ಷಿತ್, ಪ್ರಧಾನ ಮಂತ್ರಿಯೇ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮದ ಮುಖ್ಯ ಯಜಮಾನರಾಗಿರಲಿದ್ದಾರೆ ಎಂದರು.


ಶ್ರೀ ಮಲ್ಲಿಕಾರ್ಜುನ ಟ್ರಾವೆಲ್ಸ್
shree mallikarjuna travels
explore the world with comfort
19ನೇ ವರ್ಷದ ಸಂಭ್ರಮ

ವಿಮಾನ ಪ್ರವಾಸಗಳು

• ವಿಮಾನ ಪ್ರಯಾಣ ವೆಚ್ಚ • ಗುಣಮಟ್ಟದ ಹೋಟೆಲ್‌ಗಳಲ್ಲಿ ವಾಸ್ತವ್ಯ • ಆಟೋ/ಬೋಟ್ ಶುಲ್ಕ
• 2+2 ಎಸಿ ಬಸ್ ಪ್ರಯಾಣ • ದಕ್ಷಿಣ ಭಾರತ ಶೈಲಿ ಸಸ್ಯಾಹಾರಿ ಆಹಾರ • ಸಂಜೆ ಸ್ನಾಕ್ಸ್ • 1ಲೀಟರ್ ವಾಟರ್

ಕಾಶ್ಮೀರ್ 6/9ದಿನಗಳು – ಪ್ರತಿ ತಿಂಗಳು
ಚಾರ್‌ಧಾಮ್ ಯಾತ್ರ 13ದಿನಗಳು – ಏಪ್ರಿಲ್, ಮೇ, ಜೂನ್, ಜುಲೈ, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್
ಕೋಲ್ಕತಾ ಪುರಿಜಗನ್ನಾಥ 11ದಿನಗಳು – ಏಪ್ರಿಲ್, ಮೇ, ಜೂನ್, ಜುಲೈ, ಸೆಪ್ಟೆಂಬರ್, ಅಕ್ಟೋಬರ್,ನವೆಂಬರ್
ಶಿಮ್ಲಾ ಮನಾಲಿ 7ದಿನಗಳು – ಪ್ರತಿ ತಿಂಗಳು
ಮುಕ್ತಿನಾಥ ನೇಪಾಳ 14ದಿನಗಳು – ಮಾರ್ಚ್, ಏಪ್ರಿಲ್, ಮೇ, ಜೂನ್ ಸೆಪ್ಟೆಂಬರ್,ಅಕ್ಟೋಬರ್, ನವೆಂಬರ್
ಅಸ್ಸಾಂ ಗುವಾಹಟಿ 12ದಿನಗಳು – ಮಾರ್ಚ್, ಏಪ್ರಿಲ್, ಮೇ, ಜೂನ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್
ಗುಜರಾತ್ 9ದಿನಗಳು – ಜನವರಿ, ಫೆಬ್ರವರಿ, ಮಾರ್ಚ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್
ಮಧ್ಯಪ್ರದೇಶ 11ದಿನಗಳು – ಜನವರಿ, ಫೆಬ್ರವರಿ, ಮಾರ್ಚ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್
ರಾಜಸ್ತಾನ್ 12ದಿನಗಳು – ಜನವರಿ, ಫೆಬ್ರವರಿ, ಮಾರ್ಚ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್
ಕೇರಳ 8ದಿನಗಳು – ಪ್ರತಿ ತಿಂಗಳು
ತಮಿಳ್‌ನಾಡು 8ದಿನಗಳು – ಪ್ರತಿ ತಿಂಗಳು
ಶ್ರೀಶೈಲ ಮಂತ್ರಾಲಯ 5ದಿನಗಳು – ಪ್ರತಿ ತಿಂಗಳು

6ದಿನಗಳ ಕಾಶಿ ವಿಮಾನ ಪ್ರವಾಸ 2024
20% ರಿಯಾಯ್ತಿ
ಪ್ರಯಾಣದ ಅವದಿ: ಮಾರ್ಚ್, ಎಪ್ರಿಲ್, ಮೇ 2024 ರವರೆಗೆ

ಬೆಂಗಳೂರು 9902008056 | ದಾವಣಗೆರೆ 6362547001 | ಹುಬ್ಬಳ್ಳಿ 8660880048
www.smttourpackages.com


## ಜಿಲ್ಲೆಯಲ್ಲಿ ಪಡಿತರ ಧಾನ್ಯ ಹಂಚಿಕೆ

ದಾವಣಗೆರೆ, ಜ.16- ಜಿಲ್ಲೆಯಲ್ಲಿನ ಪಡಿತರ ಚೀಟಿ ದಾರರಿಗೆ ಪಡಿತರ ಧಾನ್ಯ ಹಂಚಿಕೆ ಮಾಡಲಾಗಿದೆ ಎಂದು ತಹಶೀಲ್ದಾರ್ ಡಾ.ಅಶ್ವತ್ಥ್ ತಿಳಿಸಿದ್ದಾರೆ.

ಅಂತ್ಯೋದಯ ಪಡಿತರ ಚೀಟಿದಾರರಿಗೆ ಕಾರ್ಡ್‌ಗೆ 21 ಕೆ.ಜಿ. ಅಕ್ಕಿ ಮತ್ತು 14 ರಾಗಿ, ಆದ್ಯತಾ ಹಾಗೂ ಬಿ.ಪಿ.ಎಲ್ ಪಡಿತರ ಚೀಟಿದಾರರಿಗೆ 3 ಕೆ.ಜಿ. ಅಕ್ಕಿ ಮತ್ತು ಪ್ರತಿ ಸದಸ್ಯರಿಗೆ 2ಕೆ.ಜಿ. ರಾಗಿ ಉಚಿತವಾಗಿ ವಿತರಿಸಲಾಗುತ್ತದೆ ಹಾಗೂ ಪ್ರತಿ ಕೆ.ಜಿ. ಗೆ ರೂ.15ರಂತೆ ಒಪ್ಪಿಗೆ ನೀಡಿದ ಎ.ಪಿ.ಎಲ್. ಏಕ ಸದಸ್ಯ ಪಡಿತರ ಚೀಟಿದಾರರಿಗೆ 5 ಕೆ.ಜಿ., ಎರಡು ಮತ್ತು ಹೆಚ್ಚಿನ ಸದಸ್ಯರನ್ನು ಹೊಂದಿರುವವರಿಗೆ 10 ಕೆ.ಜಿ ಅಕ್ಕಿಯನ್ನು ವಿತರಿಸಲಾಗುವುದು.

ಗ್ಯಾರಂಟಿ ಯೋಜನೆಯಡಿ 5 ಕೆ.ಜಿ. ಅಕ್ಕಿ ಬದಲಾಗಿ ಪಡಿತರ ಚೀಟಿದಾರರಿಗೆ ನೇರ ನಗದು ವರ್ಗಾವಣೆ ಮಾಡುತ್ತಿದೆ.


22-01-2024 ರಂದು
ಅಯೋಧ್ಯ ಶ್ರೀರಾಮ ಮಂದಿರ ಉದ್ಘಾಟನೆ ಪ್ರಯುಕ್ತ
Copper Pearl Rs. 7998/-
Fully Automatic Rs. 5999/-
ಬೆಳ್ಳಿಯ ಶ್ರೀರಾಮನ ಫೋಟೋ ನೆನಪಿನ ಕಾಣಿಕೆಯಾಗಿ ಪಡೆಯಿರಿ
ಮರುತ್ ಎಂಟರ್‌ಪ್ರೈಸಸ್
9886896574, 9845867574



ಪ್ರಥಮ ವರ್ಷದ ಪುಣ್ಯಸ್ಮರಣೆ



ಶ್ರೀ ಜೊಳ್ಳಿ ರಾಮಣ್ಣನವರು
ಜೊಳ್ಳಿ ಕಾಂಪೌಂಡ್, ಜೊಳ್ಳಿ ನಿಲಯ, ದಾವಣಗೆರೆ.
(ಪತ್ನಿ : ದಿ|| ಶ್ರೀಮತಿ ಜೊಳ್ಳಿ ಚಂಪೂಬಾಯಿ)
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು, ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ ನೀವು ತೋರಿಸಿದ ಹಾದಿಯಲ್ಲಿ ಮುನ್ನಡೆಯುತ್ತಿರುವ ನಿಮ್ಮ ಕುಟುಂಬ ವರ್ಗದವರು.
ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಮೊಮ್ಮಕ್ಕಳಾದ ವರುಣ್ ಜೊಳ್ಳಿ, ಅಮಿತ್ ಜೊಳ್ಳಿ, ಸುಪ್ರಿತ, ಅಮೃತ, ಪೂರ್ವಿಕಾ, ಚಂಪೂಚಾರ್ವಿ, ಚತುರ್ವಿ, ತೇಜಸ್, ಸ್ವರೂಪ್.



RPM SWASTHYA
SWASTHYA FOR A HEALTHY FAMILY
ಆರೋಗ್ಯಕರ ಕುಟುಂಬಕ್ಕಾಗಿ ಸ್ವಾಸ್ಥ್ಯ
HEART HEALTH ಹೃದಯದ ಸ್ವಾಸ್ಥ್ಯ · IMMUNITY ರೋಗ ನಿರೋಧಕ ಶಕ್ತಿ · EYES HEALTH ಕಣ್ಣಿನ ಸ್ವಾಸ್ಥ್ಯ · NERVOUS SYSTEM ನರಗಳ ಸ್ವಾಸ್ಥ್ಯ · LIVER HEALTH ಲಿವರ್ ಸ್ವಾಸ್ಥ್ಯ · SKIN HEALTH ಚರ್ಮದ ಸ್ವಾಸ್ಥ್ಯ · CANCER ಕ್ಯಾನ್ಸರ್ · OBESITY ಬೊಜ್ಜು · HAIR HEALTH ಕೂದಲಿನ ಸ್ವಾಸ್ಥ್ಯ · COLESTEROL ಕೊಲೆಸ್ಟ್ರಾಲ್ · BLOOD PRESSURE ರಕ್ತದೊತ್ತಡ · REDUCE STRESS ಒತ್ತಡ ಕಡಿಮೆ ಮಾಡಲು
ಸಕ್ಕರೆ ಕಾಯಿಲೆಯವರಿಗೂ ಅನ್ವಯ. 100 % ಪೂರಕ ಆಹಾರ ಯಾವುದೇ ರೀತಿಯ ಸೈಡ್ ಎಫೆಕ್ಟ್ ಇರುವುದಿಲ್ಲ. 600 ರೋಗಗಳಿಗೆ ರಾಮಬಾಣ. ಇಂದೇ ಬುಕ್ ಮಾಡಿ. ಎರಡು ದಿನಗಳಲ್ಲಿ ನಿಮ್ಮ ಮನೆ ತಲುಪುತ್ತದೆ. ಬೆಲೆ MRP 3745/- ಈಗಿನ ಆಫರ್ ಬೆಲೆ 2500/- ಕೂಡಲೇ ಬುಕ್ ಮಾಡಿ
ಫೋನ್ ಪೇ ಅಂಡ್ ಗೂಗಲ್ ಪೇ ನಂಬರ್ : 72597 82546



ಭಾವಪೂರ್ಣ ಶ್ರದ್ಧಾಂಜಲಿ



ಇಂದು ದಿನಾಂಕ 17.01.2024ರ ಬುಧವಾರ ಮಧ್ಯಾಹ್ನ ನಿಧನರಾದ ಭಜನಾ ಮಂಡಳಿ ಪ್ರಪ್ರಥಮ ಅಧ್ಯಕ್ಷರಾದ
ಶ್ರೀ ಹ.ಭ.ಪ. ವಿರೂಪ್ಪಣ್ಣ ಅಂಬರ್‌ಕರ್
ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.
ಇವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಮತ್ತು ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.
ದುಃಖತಪ್ತರು
ಶ್ರೀ ಡಾ. ಎಂ.ಆರ್. ಜಯಪ್ರಕಾಶ್, ಗೌರವಾಧ್ಯಕ್ಷರು
ಶ್ರೀ ಎಂ.ಎನ್. ರಘು ಮುಸುಳೆ, ಅಧ್ಯಕ್ಷರು
ಶ್ರೀ ಎ.ವಿ. ಅಶೋಕ್ ಅಂಬರ್‌ಕರ್, ಉಪಾಧ್ಯಕ್ಷರು
ಶ್ರೀ ಈಶ್ವರರಾವ್ ಗುಜ್ಜರ್, ಕಾರ್ಯದರ್ಶಿ
ಶ್ರೀ ವಾಗೀಶ್ ಬಾಬು ಪಿ.ಗುಜ್ಜರ್, ಸಹಕಾರ್ಯದರ್ಶಿ
ಶ್ರೀ ಪ್ರಕಾಶ್ ನವಲೆ, ಕೋಶಾಧ್ಯಕ್ಷರು
ಸದಸ್ಯರುಗಳಾದ : ಶ್ರೀ ಶಂಕರರಾವ್ ನವಲೆ, ಶ್ರೀ ಮಾಲತೇಶ್ ಗುಜ್ಜರ್, ಶ್ರೀ ದೇವಾನಂದ್ ಸರ್ವದೆ, ಶ್ರೀ ರಾಜೇಶ್ ಲೋಖಂಡೆ ಶ್ರೀ ರಮೇಶ್ ತೇಲ್ಕರ್, ಶ್ರೀ ವಿಜಯಕುಮಾರ್ ಟಿಕಾರೆ, ಶ್ರೀ ಹ.ಭ.ಪ. ಮಾರುತಿ ವಂಟಕರ್, ಶ್ರೀ ಸಂಜಯ್ ಘುಟಗೆ, ಶ್ರೀ ರಂಗನಾಥ್ ಆರ್.ನವಲೆ, ಶ್ರೀ ಅರುಣ್ ಎನ್. ಗುಜ್ಜರ್, ಮಾಜಿ ಕಾರ್ಯದರ್ಶಿ
ದಾವಣಗೆರೆ ಭಾವಸಾರ ಕ್ಷತ್ರಿಯ ದೈವ ಮಂಡಳಿ (ರಿ.) ಮತ್ತು ಸಹ ಅಂಗ ಸಂಸ್ಥೆಗಳು



ಮದುವೆಯ ಪ್ರಯುಕ್ತ, ಪರಿಶುದ್ಧ ರೇಷ್ಮೆ ಸೀರೆ ಮತ್ತು ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ



OPENING TOMORROW
ಅಭಿವೃದ್ಧಿ ಸಿಲ್ಕ್ ಇಂಡಿಯ® 2024
Exclusive Wedding Collections
ಭಾರತದ ಎಲ್ಲಾ ರಾಜ್ಯಗಳಿಂದ ಪರಿಶುದ್ಧ ರೇಷ್ಮೆ ಸೀರೆಗಳು ಹಾಗೂ ರೇಷ್ಮೆ ಉತ್ಪನ್ನಗಳು
Upto 30 % Discount
ಬಿಹಾರ್ : ತಸ್ಸರ್ ರೇಷ್ಮೆ ಸೀರೆಗಳು, ಸ್ಟೋಲ್ಸ್, ಶಾಲುಗಳು, ಕರ್ನಾಟಕ : ಕ್ರೇಪ್, ಶಿಫಾನ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರಿಣಿ ತಮಿಳುನಾಡು : ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು, ಆಂಧ್ರ ಪ್ರದೇಶ : ಧರ್ಮಾವರಂ ಸೀರೆಗಳು, ಉಪ್ಪಡಾ ಮತ್ತು ಗೊಡ್ವಾಲ್ ಸೀರೆಗಳು, ಮಂಗಲಗಿರಿ ಹಾಗೂ ಪೋಚಂಪಲ್ಲಿ ಸೀರೆಗಳು ಉತ್ತರ ಪ್ರದೇಶ : ಬನಾರಸ್ ಮತ್ತು ಜಮ್‌ದಾನಿ, ಜಮಾವರ್ ರೇಷ್ಮೆ, ಟೆಂಪಲ್ ಬಾರ್ಡರ್‌ಉಳ್ಳ ಮುಲ್‌ಬಾರಿ ಸಿಲ್ಕ್, ಲಕ್ನೋ ಚಿಕಾನ್ ಕಸೂತಿ, ಮಹರಾಷ್ಟ್ರ : ಪೈಥಾಣಿ ಸೀರೆ, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್, ಪಂಜಾಬ್ : ಪಟಿಯಾಲ ಡ್ರೆಸ್ ಮೆಟೀರಿಯಲ್ಸ್ ಒರಿಸ್ಸಾ : ಸಂಬಲ್‌ಪುರಿ, ಇಕ್ಕತ್, ಬೋಂಕೈ ಸೀರೆಗಳು, ಹ್ಯಾಂಡ್‌ಲೂಮ್ ಸಿಲ್ಕ್ ಕಾಟನ್ ಚತ್ತೀಸ್‌ಘಡ್ : ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು, ಮಧ್ಯ ಪ್ರದೇಶ : ಮಹೇಶ್ವರಿ ಮತ್ತು ಚಂದೇರಿ ಸಿಲ್ಕ್ ಪಶ್ಚಿಮ ಬಂಗಾಳ : ಢಾಕ ಸೀರೆಗಳು, ಬಲ್‌ಚೂರಿ ರೇಷ್ಮೆ, ಕಲ್ಕೋತ್ತಾ ರೇಷ್ಮೆ ಸೀರೆಗಳು ಮತ್ತು ಕಾಂತ ಎಂಬ್ರಾಯಿಡರಿ ಸೀರೆಗಳು, ಅಸ್ಸಾಂ : ಮುಗಾ ಮತ್ತು ಎರಿ ರೇಷ್ಮೆ ಸೀರೆಗಳು, ಜಮ್ಮು ಮತ್ತು ಕಾಶ್ಮೀರ : ಚಿನಾನ್, ಟೆಡ್ಡಿ ರೇಷ್ಮೆ ಸೀರೆಗಳು, ಪಶ್ಮೀನಾ ಸೀರೆಗಳು, ಸ್ಟೋಲ್ಸ್, ಶಾಲುಗಳು ರಾಜಾಸ್ಥಾನ್ : ಕೋಟಾ ಸಿಲ್ಕ್, ಕೈ ಅಚ್ಚಿನ ಸೀರೆಗಳು ...
19 ರಿಂದ 28 ಜನವರಿ 2024 ರವರೆಗೆ | ಸಮಯ : ಬೆಳಗ್ಗೆ 10.30 ರಿಂದ ಸಂಜೆ 8.30 ರವರೆಗೆ
ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್
ಪಿ.ಬಿ. ರಸ್ತೆ, ದಾವಣಗೆರೆ
Entry Free | All Credit & Debit Cards Accepted | Contact - 6364165152, 9886087281



ವೈಕುಂಠ ಸಮಾರಾಧನೆ ಆಹ್ವಾನ



# 628/5A, "ಶ್ರೀ ನಿಲಯಂ", ಶಿವಾನಂದ ಸ್ವಾಮಿ ಕಾಂಪೌಂಡ್, ಕೆ.ಬಿ. ಬಡಾವಣೆ, ದಾವಣಗೆರೆ-2 ನಿವಾಸಿಗಳಾದ
ಶ್ರೀ ಮನ್ನೆ ನಾರಾಯಣಮೂರ್ತಿ ರವರು
ದಿನಾಂಕ : 04.01.2024ನೇ ಗುರುವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ತತ್ಸಂಬಂಧ ಶ್ರೀಯುತರ ಸ್ಮರಣಾರ್ಥ "ವೈಕುಂಠ ಸಮಾರಾಧನೆ"ಯನ್ನು ದಿನಾಂಕ : 18.01.2024 ರಂದು ಏರ್ಪಡಿಸಲಾಗಿದ್ದು, ತಾವುಗಳು ಬಂದು, ಭಾಗವಹಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ಸಮಯ : ಬೆಳಿಗ್ಗೆ 11.30 ಗುರುವಾರ, ಕಮ್ಮವಾರಿ ಸಮುದಾಯ ಭವನ, ದಾವಣಗೆರೆ.
ಇಂತಿ ದುಃಖತಪ್ತರು :
ಮನ್ನೆ ನಾಗೇಶ್ವರ ರಾವ್, ಮನ್ನೆ ರಂಗರಾವ್, ಮನ್ನೆ ಸೂರ್ಯಪ್ರಭಾಕರ್ ರಾವ್, ಮನ್ನೆ ಗೋಪಿಶಂಕರ್, ಸಿ. ಸರಸ್ವತಿ, ಸಿ.ಹೆಚ್. ರಾಮಲಕ್ಷ್ಮಿ
ಫೋ. : 99169 59799, 78926 67015, 97384 62378
ಭಾಗ್ಯರಂಗ ಚಿಟ್ಸ್ ಪ್ರೈ ಲಿ., ದಾವಣಗೆರೆ.
ಶ್ರೀ ಲಕ್ಷ್ಮೀ ಗಣೇಶ ಆಟೋಮೊಬೈಲ್ಸ್, ದಾವಣಗೆರೆ.



ಜನ್ಮದಿನದ ಶುಭಾಶಯಗಳು



ಚಿತ್ರದುರ್ಗ ಜಿಲ್ಲಾ ಪರಿಷತ್‌ನ ಪ್ರಥಮ ಅಧ್ಯಕ್ಷರು, ಶಾಮನೂರು ಶುಗರ್ಸ್‌ನ ಮ್ಯಾನೇಜಿಂಗ್ ಡೈರೆಕ್ಟರ್‌ರು, ಯಶಸ್ವಿ ಕೈಗಾರಿಕೋದ್ಯಮಿಗಳು, ಬಾಪೂಜಿ ಬ್ಯಾಂಕ್ ಸಮುದಾಯ ಭವನದ ಟ್ರಸ್ಟಿಗಳು, ಸಮಾಜ ಸೇವಕರು, ಸರಳ-ಸಹೃದಯರೂ ಆದ
ಡಾ|| ಎಸ್.ಎಸ್.ಬಕ್ಕೇಶ್ ಅವರಿಗೆ
ಜನ್ಮದಿನದ ಹಾರ್ದಿಕ ಶುಭಾಶಯಗಳು
ಶ್ರೀಯುತರು ನೂರ್ಕಾಲ ಬಾಳಲಿ ಎಂದು ಹಾರೈಸುತ್ತೇವೆ
ನಿರ್ದೇಶಕ ಮಂಡಳಿ
ಡಾ|| ಶಾಮನೂರು ಶಿವಶಂಕರಪ್ಪ, ಅಧ್ಯಕ್ಷರು
ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್, ಉಪಾಧ್ಯಕ್ಷರು
* ಡಾ|| ಎ.ಎಸ್. ವೀರಣ್ಣ * ಡಾ|| ಹೆಚ್. ಶಿವಪ್ಪ * ಡಾ|| ಸಿ.ವೈ. ಸುದರ್ಶನ್
* ಡಾ|| ಶಂಷಾದ್ ಬೇಗಂ * ಡಾ|| ವಿಶ್ವನಾಥ್ * ಡಾ|| ಬಿ.ಎಸ್. ರೆಡ್ಡಿ
* ಡಾ|| ಕೆ. ಹನುಮಂತಪ್ಪ * ಡಾ|| ಎಂ.ಜಿ. ಈಶ್ವರಪ್ಪ * ಡಾ|| ಅನಿತಕುಮಾರಿ ಜೆ.
* ಡಾ|| ಅರುಣಕುಮಾರ್ ಎ. * ಡಾ|| ಪಿ. ಶಶಿಕಲಾ * ಡಾ|| ಯತೀಶ್ ಬಿ.ಎಸ್.
* ಡಾ|| ಎಂ.ಎಂ. ಲಿಂಗರಾಜ್ * ಡಾ|| ಬಿ. ಪೂರ್ಣಿಮ
* ಶ್ರೀ ಬೊಮ್ಮಣ್ಣ ಕೆ. * ಶ್ರೀ ಕೆ.ಎಸ್. ವೀರೇಶ್ ಶ್ರೀ ಬಸವರಾಜ್ ಎಂ., ಜನರಲ್ ಮ್ಯಾನೇಜರ್
ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ